


Printed by :- **A. P. Chougule**
At Veer Bharat Printing Press, Belgaum.
and
Published by :- **H V. Kaujalgi,**
Chairman, **Regional Social Education Committee,**
FOR KARNATAK, BELGAUM.



ಮುನ್ನುಡಿ

ಸಕಾಲದಲ್ಲಿ ಹೊರಬಿದ್ದ ಈ ಸವಿಹೊತ್ತಿಗೆಯು ಸ್ವಾಗತಾರ್ಹವಾಗಿದೆ. ಸರಕಾರದವರು ಸಮಾಜ ಶಿಕ್ಷಣದ ಸುಗ್ಗಿಯನ್ನು ಆರಂಭಿಸಿ, ನಿರಕ್ಷರತೆಯನ್ನು ನಿರ್ನಾಮಮಾಡುವ ಹವಣಿಕೆಯಲ್ಲಿರುವರು. **ಶ್ರೀ. ಶೀಡಬಾಳ ನೀಲಕಂಠರಾಯರು,** ಈ ವಿಷಯವನ್ನು ಅಭ್ಯಸಿಸಿ, ಹಾಸ್ಯದ ಮೋಲ್ಕಿಸುಕಿನಲ್ಲಿ ಪ್ರೌಢ ಶಿಕ್ಷಣದ ಗುಳಿಗೆಗಳನ್ನು ಉಣಬಡಿಸಿರುವರು. ಈ ಚಿಕ್ಕ ದೃಶ್ಯ ನೋಡಿ ನಿರಕ್ಷರಿಗಳು ನಿಶ್ಚಯವಾಗಿ ಸಾಕ್ಷರತೆಯ ಪಾರವನ್ನು ತೀಡಿ ತಣಿಯುವರೆಂದು ನಮ್ಮ ಬಲವಾದ ನಂಬುಗೆ. ಇದಕ್ಕೆ ಸಮಾಜ ಶಿಕ್ಷಣ ಸಮಿತಿಯ ಸಹಾಯ ದೊರೆತದ್ದು ಸುವರ್ಣಕ್ಕೆ ಸುಗಂಧ ಕೂಡಿದಂತೆ ಆಗಿದೆ

Belgaum
28-11-48

P. M. UMADI,
A. O., D. S. B., Belgaum.

ಲೇಖಕನ ವಿನಂತಿ

ಈ ಚಿಕ್ಕ ಹೊತ್ತಿಗೆಯನ್ನು ಪ್ರಸಿದ್ಧಿಸುವ ಹೊಣೆಯನ್ನು ಕರ್ನಾಟಕ ಸಮಾಜ ಶಿಕ್ಷಣ ಸಮಿತಿಯವರು ಹೊತ್ತಿದ್ದರಿಂದ ಅವರಿಗೆ ಋಣಿಯಾಗಿದ್ದೇನೆ ಈ ನಾಟಕವನ್ನು ಹಳ್ಳಿಗಳಲ್ಲಿ, ಶಾಲೆಗಳಲ್ಲಿ ಅಭಿನಯಿಸುವಾಗ ತನಗೆ ಅನುಕೂಲವಿದ್ದ ಪದ್ಯಗಳನ್ನು ಸೇರಿಸಿ ಆಡಬಹುದು.

ನೀ. ಹ. ಶೇಡಬಾಳಕರ,
ಕನ್ನಡಿಗರ ಕೈಗಲ್ಲು.

೨ನೇ ಆವೃತ್ತಿಯ ಕೃತಜ್ಞತೆ.

ಈ ಅಲ್ಪಕೃತಿಯು ಕನ್ನಡಿಗರ ಮನ್ನಣೆ ಪಡೆದು ಎರಡನೇ ಸಲ ಮುದ್ರಿತವಾಗುವ ಸಮಯ ಬಂದುದಕ್ಕೆ ಸಮಾಜ ಶಿಕ್ಷಣ ಸಮಿತಿಗೂ, ಕನ್ನಡ ವಾಚಕರಿಗೂ ಋಣಿಯಾಗಿದ್ದೇನೆ

"ನೀಲಕಂಠ"

—ः ಲೇಖಕರು ः—



ಶ್ರೀ ನೀಲಕಂಠ ಹನುಮಂತ ಶೇಡಬಾಳಕರ.

ಸೇವಾ ನಿವೃತ್ತ ಶಿಕ್ಷಕರು, ಡಿ. ಎಸ್ ಓ ಮೆಂಬರ ಕಾಗವಾಡ

ಬ್ಲ್ಯಾಕಮಾರ್ಕೇಟ, ರಾಜದ್ರೋಹ, ಕೈತರರಾಜ್ಯ ಇತ್ಯಾದಿ

ನಾಟಕಗಳ ಲೇಖಕರು

“ ಶಿಕ್ಷಣದಿಂದಲೇ ಆತ್ಮೋದ್ಧಾರ । ಅದುವೇ ದೇಶೋದ್ಧಾರ ॥
ಅದಕಾಗಿ ಕಲಿಯಿರಿ, ಕಲಿತು ಸುಖಪಡೆಯಿರಿ.
ಸುಖದ ಸುಗ್ಗಿಯೇ, ಸ್ವರಾಜ್ಯ, ಅದುವೇ ರಾಮರಾಜ್ಯ ”

‘ ಶ್ರೀ. ಸೌ. ಪದ್ಮಾವತಿದೇವಿ ಅಂಗಡಿ,

ಸ್ವರಾಜ್ಯದ ಸಸಿಯು ಬೆಳೆದು ಮಹಾವೃಕ್ಷ ವಾಗಬೇಕಾಗಿದ್ದಲ್ಲಿ ಅಶಿಕ್ಷಿತತನದ ರೋಗವನ್ನು ಹೋಡೆದೋಡಿಸಿ ಸಾಕ್ಷರತಾ ಪ್ರಸಾರ ಮಾಡಿ ನೈತಿಕ ಬಲವನ್ನು ಬೆಳೆಯಿಸುವದೇ ವಿಧಾಯಕ ಕಾರ್ಯದ ಗುಟ್ಟು. ಆ ಗುಟ್ಟು ಪ್ರೌಢ ಶಿಕ್ಷಣದಿಂದ ಬೆಳೆದು ಬಾಳಿ ಬೆಟ್ಟನಾಗಿ ಹಿಂದರಾಷ್ಟ್ರದ ಸ್ವಾತಂತ್ರ್ಯವನ್ನು ಶಾಶ್ವತ ಉಳಿಸಿ ಬೆಳಿಸಲಿ

ಶ್ರೀ. ‘ ಅಂಗಡಿ ಷಣ್ಮುಖಪ್ಪ ’

“ ಜನ್ಮವನ್ನು ತಾಳು, ಸುಶಿಕ್ಷಿತನಾಗಿ ಬಾಳು ”

‘ ನೀಲಕಂಠ ’

|| ಜಯ ಹಿಂದ ||

ಆತ್ಮೋದ್ಧಾರ

(ಏಕಾಂಕ ನಾಟಕವು)

|| ನಾಂದಿ ||

೧ ನೇ ದೃಶ್ಯ

(ವಸಂತರಾಯರಮನೆ–ವಸಂತರಾಯ ದೇಶಭಕ್ತ. ಖಾದಿ ಉಡುಪಿನಲ್ಲಿ ಖುರ್ಚಿಯ ಮೇಲೆ ' ಒಕ್ಕಲಿಗ ' ಮಾಸಪತ್ರಿಕೆ ಓದುತ್ತ ಕೂತಿದ್ದಾನೆ. ಪಡಸಾಲೆಯಲ್ಲಿ ಒಂದೆರಡು ಖುರ್ಚಿ ಒಂದು ಕೋಚು ಟೇಬಲು ಇರುತ್ತದೆ)

ಹಂಪಣ್ಣಃ— (ಪ್ರವೇಶ) ಶರಣರೀ ಯಜಮಾನರ್ರ ? (ಎಂದು ದೂರದಲ್ಲಿ ನಿಲ್ಲುತ್ತಾನೆ.)

ವಸಂತರಾವಃ— ಬಾ, ಹಂಪಣ್ಣಾ, ಏನು ಕಾರಣ ಬರೋಣವಾಯಿತು ? ಅಷ್ಟು ದೂರದಲ್ಲೇಕೆ ನಿಂತಿರುವೆ ? ಈ ಕೋಚಿನ ಮೇಲೆ ಕೂಡ್ರು ಬಾ ?

ಹಂಪಣ್ಣಃ— ಅದೇನ ಬ್ಯಾಡರಿ ? ನಮ್ಮ ರೈತ ಮಂದಿಗಿ ಕೋಚಾ, ಕುರ್ಚಿಯಾತಕ ಬೇಕರಿ ? ಕಂಬಳಿಗಿ ನಮಗ ಗಂಟಿ ಅಯ್ತಿ ?

ವಸಂತರಾವಃ— ಹಾಗೆನ್ನಬಾರದು. ರೈತರೆಂದರೆ ರಾಷ್ಟ್ರದ ಮುಖ್ಯ ಘಟಕವಿರುವಿರಿ. ರೈತನೆ ರಾಷ್ಟ್ರದ ಹೃದಯವು ಅಣ್ಣಾ ! ರೈತನ ದುಡಿತವೆ ದೇಶಕೆ ಅನ್ನಾ ! ಎಂದು ಕವಿಗಳು ಹಾಡುತ್ತಾರೆ. ಬಾ, ಬಾ, ಇಲ್ಲಿಗೆ, ಕೂಡ್ರು [ಎಂದು ಕೈ ಹಿಡಿದು

ಕೂಡ್ರಿಸುತ್ತಾನೆ. ಹಂಪನು ಅವ್ಯವಸ್ಥಿತ ಕೂಡ್ರುತ್ತಾನೆ.] ಏನು ಕೆಲಸವಿದೆ ಹೇಳು.

ಹಂಪಣ್ಣಃ— ಈ ಪೊತ್ತು ಹರ್‍ಯಾಗ ಪೋಟಮನ್‌ಸಾಬ ಈ ಕಾದಗಾ, ಒಗದ ಹೋಗ್ಯಾನ, ಹೆಂಡಿಕಸಾ ಮಾಡಿ ಬಿತ್ತ್ಯಾದ ಜೋಡಣಿ ಮಾಡಿ ಆಳಗಳನ್ನು ಹೊಲಕ ಕಳಿಸಿ ಈ ಕಾಗದದ ಒಡಪಕ್ಷ ಕೇಳಾಕ ಬಂದೀದೆನರಿ. [ಕಾರ್ಡು ಕೊಡುತ್ತಾನೆ. ವಸಂತ ರಾಯರು ಓದಿ]

ವಸಂತರಾವಃ— ಇದು ನಿನ್ನ ಮಗಳು ಬರೆಯಿಸಿದ್ದಾಳೆ. ಕಂಗಾಲಪುರಿಯಿಂದ ಬಂದಿದೆ. ನಿನ್ನ ಅಳಿಯನು ಅತಿಶಯ ಅಜಾರಿ ಇದ್ದಾನೆ. ಪತ್ರ ಕಂಡಾಕ್ಷಣ ಬಂದರೆ ಮುಖ ನೋಡಲು ಸಿಗುತ್ತದೆ. ತೀವ್ರ ಹೊರಡಬೇಕೆಂದು ನಿನ್ನ ಮಗಳು ಬರಯಿಸಿರು ವಳು. ಬೇಗ ಹೋಗು.

ಹಂಪಣ್ಣಃ— ಇನ್ನ ಆಗಿನಗಾಡಿ ಯಾವಾಗ ಅಯ್ತಿರೀ ! ಈಗ ಹ್ವಾದ್ರ ಶಿಕ್ಕೀತ ಏನ್ರಿ ?

ವಸಂತರಾವಃ— [ಕೈಗಡಿಯಾರ ನೋಡಿ] ಈಗ ಹನ್ನೊಂದು ಗಂಟೆಯಾಗಿ ಹೋಗಿದೆ. ಗಾಡಿಯು ಹೋಯಿತು. ನಾಳೆ ಹನ್ನೊಂದರವರೆಗೆ ಗಾಡಿಯಿಲ್ಲ.

ಹಂಪಣ್ಣಃ— ಅಂದಬಳಿಕ ಇದ ಫೋಟಾಳೆ ಆತಲ್ಲರೀ ! ಈ ಮಜಕೂರ ಕೇಳಾಣಾ ಒಂದಗಳಿಗಿ ಅಂದ್ರ ವಂದ ವರ್ಸಘಾಂಗ ಅನಸಾಕ ಹತ್ತೇತಿ ಒಂದಧಿನಾ ತಗೋದ ಹ್ಯಾಂಗ ನಮ್ಮ ಯಾಳೇನ ಸುಮಾರ ಅನಬೇಕಾತ ಮತ್ತೇನ ?

ವಸಂತರಾವಃ— ನಿಮ್ಮ ತಪ್ಪಿಗಾಗಿ ಹೀಗೆ ಕಳವಳ ಪಡು ತ್ತೀರಿ, ನೀನು ಕಲಿತವನಿರುತ್ತಿದ್ದರೆ ಪತ್ರ ಬಂದಾಕ್ಷಣ ಓದುತ್ತಿದ್ದಿ. ಸಂಗತಿ ತಿಳಿದ ಕೂಡಲೇ ಹೊರಡುತ್ತಿದ್ದರೆ ಈ ಹೊತ್ತು ಸಂಜೆಗೆ

ಕಂಗಾಲಪುರಿಗೆ ಮುಟ್ಟುತ್ತಿದ್ದಿ. ಓದು ಬರಹ ಬಾರದ್ದರಿಂದ ಹೀಗೆ ಪಶ್ಚಾತ್ತಾಪ ಪಡುವಿರಿ. ಇನ್ನಾದರೂ ಕಲಿಯಲಿಕ್ಕ ಪ್ರಾರಂಭಿಸಿರಿ. ಇದು ಲೋಕ ರಾಜ್ಯವಿದೆ. ಕಲಿತು ಆತ್ಮೋದ್ಧಾರ ಮಾಡಿಕೊಳ್ಳಿರಿ.

ಹಂಪಣ್ಣಃ—ನಮ್ಮ ಮುತ್ಯಾಮೂರತಲಿ ಆತ ಸಾಲಿಕಟ್ಟಿ ಹತ್ತಿಲ್ಲರಿ. ನಮ್ಮ ತಾಯಿ ತಂದಿ ನಮಗ ಸಾಲಿಗಿ ಹಾಕಲಿಲ್ಲ. ಅಂದಬಳಿಕ ಮಾಡೋದಯಾನ ನಮ್ಮ ಕರ್ಮ ಅನೋದಾ ಆತ ಈ ವರ್ಷದಾಗ ಮಾತ್ರ ಹುಡುರನ್ನ ಸಾಲಿಗಿ ಹಾಕದಿದ್ರ ದಂಡಾ ಮಾಡತಾರ ಅನಾಣಾ ಹುಡುರನ್ನ ಸಾಲಿಗಿ ಹಾಕಿದ್ದೇನ ? ಅವ ಕಲಿತ ಎಂದ ಶ್ಯಾಣೇರ ಆಗತಾರೋ ಯಾರ ಬಲ್ಲರ ?

ವಸಂತರಾವಃ – ಈಗ ನಮ್ಮ ರಾಜ್ಯವಿದೆ. ಅಂದರೆ ನಮಗೆ ಸ್ವರಾಜ್ಯ ಶಿಕ್ಕಿದೆ ಅದಕ್ಕಾಗಿ ಶಿಕ್ಷಣ ಪ್ರಸಾರ, ನೀರಾವರಿ ಯೋಜನೆ, ಉದ್ಯೋಗವೃದ್ಧಿ ಇತ್ಯಾದಿ ಕೆಲಸಗಳು ಭರದಿಂದ ನಡಿದಿವೆ. ಮೊದಲು ಪರಕೀಯ ಸರಕಾರವಿತ್ತು. ಅವರು ನಮ್ಮನ್ನು ಆದಷ್ಟು ಅಜ್ಞಾನದಲ್ಲಿಟ್ಟು ನಾಡಿನ ಸಿರಿಯನ್ನು ಸುಲಿದು ಸುಖಿಸುತ್ತಿದ್ದರು. ಅದಕಾಗ್ಕಿ ನೀವೂ ನಿರಕ್ಷರ ಜನರು ಕಲಿತು ಸುಶಿಕ್ಷಿತರಾಗಿ ದೇಶದ ಬಲವನ್ನು ಬಳೆಯಿಸಿರಿ.

ಹಂಪಣ್ಣಃ— ಹೌಂದ, ಹೌಂದ ಮೊನ್ನೆ ಸಮಾರಂಭಮಾಡಿದರ, ಗಿಡಗಳ ಹಚ್ಚಾಕ ಹೇಳಿದ್ರ, ಗಾಂಧಿ ಮಹಾತ್ಮೇರ ಮೆರುಣಗಿ ತಗದಿದ್ರ ಅದಸ್ವರಾಜ್ಯ ಅಲ್ಲೇನರಿ. ಅದಯಾರ ಕೈಯಾಗ ಶಿಕ್ಕೇತಿರಿ ?

ವಸಂತರಾವಃ— ನೀನು ಹೇಳಿದ್ದು, ಸ್ವಾತಂತ್ರ್ಯ ಉತ್ಸವ ದಿನದ ಸಂಗತಿ. ನಮಗೆ ಸ್ವಾತಂತ್ರ್ಯಶಿಕ್ಕು ಪೂರ್ಣವರ್ಷವಾಯಿತು. ಅದಕ್ಕಾಗಿ ಆ ದಿನವನ್ನು ಉತ್ಸವದಿಂದ ಆಚರಿಸಿತು. ಸ್ವರಾಜ್ಯ ನಮ್ಮೆಲ್ಲರಿಗೂ, ನಿನಗೂ ಸಹ ಶಿಕ್ಕಿದೆ. ಸ್ವರಾಜ್ಯ ಅಂದರೆ ನಮ್ಮ

ನಾಡಿನ ರಾಜ್ಯದಾಡಳಿತವನ್ನು ನಮ್ಮ ಜನರೇ ನಡಿಸುವದು. ಈ ಸ್ವಾತಂತ್ರ್ಯಪಡೆಯಲಿಕ್ಕೆ ಕಾಂಗ್ರೇಸ್ಸು ೬೦ ವರ್ಷ ಕಷ್ಟ ನಷ್ಟ ಗಳನ್ನು ಸಹಿಸಿ ಬ್ರಿಟೀಷರಂಥ ಬಲಾಢ್ಯರನ್ನು ಹೊರಹಾಕಿ ನಿಮ್ಮೆಲ್ಲರ ಉದ್ಧಾರಕ್ಕಾಗಿ ರಾಜ್ಯಕಾರಭಾರವನ್ನು ಕೈಕೊಂಡಿದೆ. ಅದಕ್ಕಾಗಿ ನೀವೆಲ್ಲರೂ ಕಲಿತು ದೇಶದ ರೀತಿ ನೀತಿಗಳನ್ನು ತಿಳಿದು ವರ್ತಿಸಲಿಕ್ಕೆ ಪ್ರಯತ್ನಿಸಿರಿ.

ಹಂಪಣ್ಣಃ— ಈ ವಯದಾಗ ಕಲಿಯೋದ ಅಂದ್ರ "ನೀ ಕೆಟ್ಟಮಾತ" ನಮ್ಮ ಕೈ ಹೊಳ್ಳುವ ಹ್ಯಾಂಗಾ? ಕಲಸಾವರ ಮುಂದ ಕೂತ ಕಲಿಯೋದ ಹ್ಯಾಂಗಾ? ಛೇ, ಬಲನಾಚಿಗೆಗೆಟ್ಟ ಕೆಲಸವಿದ್ರಿ ಇದ.

ವಸಂತರಾವಃ - ಕಲಿಯಲಿಕ್ಕೆ ನಾಚುತ್ತೀರಿ? ಅಲ್ಲದಸಲ್ಲದ ಮಾತಿಗಾಗಿ ಹೋಡದಾಟ ಮಾಡಲಿಕ್ಕೆ ನಾಚುವದಿಲ್ಲ. ಕೋಸುಲಿಗೆ ಮಾಡಿ ಪೋಲೀಸರ ಬಂಧನಕ್ಕೆ ನಾಚುವದಿಲ್ಲ. ಸರಾಯಿ ಕುಡಿದು ಗಟಾರಗಂಗೆಯಲ್ಲಿ ಬೀಳಲಿಕ್ಕೆ ನಾಚುವದಿಲ್ಲ. ಕಲಿಯಲಿಕ್ಕೆ ಮಾತ್ರ ನಾಚಿಕೆ ಬರುತ್ತದೇನು? ಚಲೋಕೆಲಸಕ್ಕೆ ನಾಚಬೇಡಿರಿ. ಹೇಸಿ ಕೆಲಸಕ್ಕೆ ನಾಚಿರಿ. ಅಶಿಕ್ಷಿತರು, ಹುಂಬರು ಎಂದು ಅನ್ನಿಸಿಕೊಳ್ಳಲಿಕ್ಕೆ ನಿಮಗೆ ನಾಚಿಕೆಯಾಗುವದಿಲ್ಲವೇ? ಅವೇನು ಇಲ್ಲ ಅಶಿಕ್ಷಿತರೆಲ್ಲರೂ ನಾಚದೆ ಕಲಿಯಿರಿ. ಕಲಿತು ಸುಶಿಕ್ಷಿತರೆಂದು ಮರ್ಯಾದೆ ಪಡಿಯಿರಿ.

॥ ಪದ ॥ ತುಝಾಚ ಚಕ್ರಾ

ಶಿಕ್ಷಣ ಪೊಂದಿರಿ। ಸಾಕ್ಷರರಾಗಿರಿ ರೈತರೇ ॥
ಪ್ರೌಢರೆ ರಾತ್ರಿಯ ಶಾಲೆಗೆ ಪೋಗಿರಿ ನೀವು।
ಭರದಲಿ ಓದಲು ಬರೆಯಲು ಬರುವವು।
ನೇಹರು ಸರಕಾರಕ್ಕೆ। ಸಹಾಯ ನೀಡುತಲಿ ॥ ೧ ॥ ಶಿಕ್ಷಣ

ಹಂಪಣ್ಣಃ— ತಿಳೀತ ಬಿಡ್ರಿ ನಿಮ್ಮಂಗ ಕಳಕಳಿಲೆ ಹೇಳಾವರ ಗಂಟ ಬಿದ್ರ ನಮ್ಮಂಥವರ ಕೇಳ ಕೇಳತಾರ. ನಾ ಕಲಿಲಾಕ ತಯಾರ ಇದ್ಯಾನ ನೋಡ್ರಿ ನೀವ ಕಲಸರಿ. ಇನ್ನ ಮ್ಯಾಲ ನಿಮ್ಮ ಮಾತ ·ಮುರ ದರ ಕೇಳ್ರಿ; ಅವುರಾಣಿ, ದ್ಯಾವರಾಣಿ ನಾ ಕಲಿಲಾಕ ತಯಾರ ಇದೇನಿ.

ವಸಂತರಾವಃ— ಶಾಬಾಸ, ಹಂಪಣ್ಣಾ, ನಿನ್ನ ನಿಶ್ಚಯ ದಿಂದ ನನಗೆ ಆನಂದವಾಯಿತು ನಿನ್ನಂತೆ ನಮ್ಮ ನಾಡಿನಲ್ಲಿಯ ಅಶಿಕ್ಷಿತ, ಸ್ತ್ರೀ ಪುರುಷರು ಕಲಿತು ದೇಶ ದೊಳಗಿನ ಅಶಿಕ್ಷಿತ ತನದ ರಾಕ್ಷಸನನ್ನು ಹೊರ ಓಡಿಸಬೇಕೆಂದು ದೇವರ ಹತ್ತಿರ ಬೇಡಿಕೊಳ್ಳುತ್ತೇನೆ.

ಹಂಪಣ್ಣಃ— ಇಂದ ನನ್ನ ಮನಸ ಜರಾ ಚಿಂತ್ಯಾಗ ಏತಿ. ಊರಿಗಿ ಹೋಗಿ ಬರತೇನಿ ಆ ಮ್ಯಾಲ ನನ್ನಂಥಾ ಮಂದಿಗಿ ಕೂಡಿಸಿ ಕಲಿಯೋಪ ಜೋಡಣಿ ಮಾಡೋದ ನೋಡ್ರಿ, ಹೋಗತೇನರಿ. ಶರಣು. (ಅಂದು ಹೋಗುತ್ತಾನೆ.) (ಗಜಬರ ಸಾಬನು ಪ್ರವೇಶಿಸುತ್ತಾನೆ.

ಗಜಬರ— ಸಲಾಮುಸಾಬ ! ಬಿಜಾಪೂರುಕು ಜಾನೇಕು ಮೋಟಾರ ತಯ್ಯಾರ ಹುವಾಹೈ, ಆಪಕು ಜಲದಿ ಆನೇಕು ಅಂಗಡಿ ಸಾಬ ಬುಲಾಹೈ ?

ವಸಂತರಾವ.— ಸರಿ. ನಾನಾದರೂ ಅದೇ ಸಿದ್ಧತೆಯಲ್ಲಿದ್ದೇನೆ. ನಾಳೆ ವಿಜಾಪೂರದಲ್ಲಿ ಪ್ರೌಢಶಿಕ್ಷಣ ಸಮಿತಿಯ ಮೀಟಿಂಗು ಅದೆ. ಏನೋ ಗಜಬರ ನಿನಗೆ ಸಂಬಳವೆಷ್ಟಿದೆ.

ಗಜಬರಃ— ಮುಝೆ ತೀಸ ರೂಪಿಯೇ ಮಿಲತೆತೆ, ಏ ಮೆಹಿ ನೇಮೆ ಮುಝೆ ಲಿಖನೇಕೂ, ಪಢನೇಕೂ, ಸಹಿ ಕರನೇಕೂ ಆರಹೆಹೈ ಇಸವಾಸ್ತೆ, ಪಾಂಚ ರೂಪಯೇ ಜಾದಾ ಮಿಲರಹೆ ಸಾಬ.

ವಸಂತರಾವ: — ಹೌದು, ಅಶಿಕ್ಷಿತ ನೌಕರರು ಸುಶಿಕ್ಷಿತರೆಂದು ಗಣಿಸಲ್ಪಟ್ಟಲ್ಲಿ ಅವರಿಗೆ ಐದು ರೂಪಾಯಿ ಸಂಬಳ ಹೆಚ್ಚಿಸುವರು. ಜೇಲಿನಲ್ಲಿದ್ದ ಅಶಿಕ್ಷಿತ ಕೈದಿಗಳು ಸುಶಿಕ್ಷಿತರಾದಲ್ಲಿ ಅವರ ಶಿಕ್ಷೆಯ ದಿನಾವಧಿಯನ್ನು ಕಡಿಮೆ ಮಾಡಬೇಕೆಂದು ಸದ್ಯದ ಸರಕಾರವು ಯೋಜನೆಯನ್ನು ಮಾಡಿದೆ.

ಗಜಬರಃ — ಏ ಕಾಂಗ್ರೇಸ ಸರಕಾರ ಆಚ್ಛೆ ಹೈ ? ಗೋರ ಗರೀಬ ಲೋಕೋಂಕಾ ಪರವರ ದಿಗಾರಹೈ. ಅಚ್ಛಾಸಾಬ ಆಪಕಾ ಬಿಸ್ತ್ರಾ ಲಾವ್ ಹಮ್ ಲೇಕು ಚಲತೆಹೈ ?

ವಸಂತರಾವಃ — ತಗೋ ಈ ಹೊಲ್ಡಾಲು ನಡೆ, ನಾನು ಇಷ್ಟರಲ್ಲಿಯೇ ಬಂದೆನು. [ತೆರೆಬೀಳು]

---

೨ ನೇ ದೃಶ್ಯ

ಒಂದು ದಾರಿ.

(ಗಟ್ಟುಲಾಲನು ವಿಚಾರಿಸುತ್ತಾ ಬರಹತ್ತಿದ್ದಾನೆ. ನಾಗಪ್ಪನು ಭೆಟ್ಟಿಯಾಗುತ್ತಾನೆ.)

ಗಟ್ಟುಲಾಲಃ — (ಸ್ವಗತ) ಇಂಗ್ರಜಿ ಮಂದಿ ಹೋಗಿ ಕಾಂಗ್ರೇಸ ಮಂದಿ ಬಂದದ್ದು ಬೇಶ ಆಗಲಿಲ್ಲ. ನಮದು ಸಬ್ ಕಾಂಸ್ಥಾನ ಕಡಿಮೆ ಮಾಡಾಕಹತ್ತಿದಾವ, ಕೂಲಕಾಯದಾ ಟೆನನ್ಸಿದು ಬಿಲ್ಲಾ ಮಾಡಿ ನಮುಗಲ್ಲಾಕೆ ಉರಲಾ ಹಾಕಿದಾವ ಕಾಳಾ ಬಾಜಾರ ಬಂದ ಮಾಡಿ ಬಿಟ್ಟಿದಾವ್. ಅರೇ, ಕಾಳಾಬಾಜಾರ ಮಾಡಿದ್ರ (ಕೈದ ಖಾನೇದಾಗ ಹಾಕತಾರ)ಅರೇ ಬಾಲಾಜಿ ? ಕ್ಯಾವಖತ ಆಯಾವೇಭೋ ? ಕುಣಬಿಮಂದೀಗೆ ಕಲಸಾಕ ಹತ್ತಿದಾರ. ಕುಣಬಿಮಂದಿ ಕಲಿತಂದ್ರ

ನಾವ್ ಮಾರವಾಡಕ ಹೋಗಬೇಕಾಗತಯ್ತು ? (ನಾಗಪ್ಪನು ಬರುತ್ತಾನೆ. ಶರಣರೀ ಸೇಡಜಿ ಅನ್ನುತ್ತಾನೆ.)

ಗಟ್ಟುಲಾಲಃ- ಜೀ, ಗೋಪಾಲ ನಾಗಪ್ಪಾ ಎಲ್ಲಿಗಿ ನಡದೀದಾವ್.

ನಾಗಪ್ಪ:— ಶರಣರೀ ಸೇಡಜೀ, ಕೂಲೀ ಆಳ ಹೇಳಾಕ ಕೇರಿಗಿ ನಡದಿದ್ದೇನ ?

ಗಟ್ಟುಲಾಲಃ- ಕೇರಿಗೆಜಾವ್ ನಹಿ ತೋ ಗೋರಿಗೆ ಜಾವ್ ಆರೆ ಬಾಬಾ ನಮುದು ಬಡ್ಡಿ ಎಂದ ಕುಡಿತಿದಾವ ತಂಬಾಕ ಮಾರಿ ರೊಕ್ಕಾ ತಂದಿದಾವ್ ಇಂದ ನಮುದು ಬಡ್ಡಿ ಕೊಡಾಕ ಬೇಕ ನಹಿತೋ ನೆಟಗ ಆಗಾಕ್ಕಿಲ್ಲ.

ನಾಗಪ್ಪಃ— ನಿಮ್ಮ ಬಡ್ಡಿ ಕೊಡತೇನ ಇಟ್ಯಾಕ ಗಡಬಿಡಿ ? ನಾನೇನು ಓಡಿ ಹೋಗೋದುಲ್ಲ ನಿಮದ ಎಷ್ಟು ದಿನದ ಬಡ್ಡಿ ಉಳಿದಯ್ತಿ ?

ಗಟ್ಟುಲಾಲಃ— ಅರೇ ಬಾಬಾ ನೀ ಓಡಿ ಹೋಗುದುಲ್ಲ, ನಾ ಓಡಿ ಹೋಗು ವಖತ ಬಂದಿದಾವ! ಕಾಂಗ್ರೇಸ ರಾಜ್ಯ ಬಿಟ್ಟು ಗೋವಾದಾಗ ಹೋಗಬೇಕಂತ ವಿಚಾರ ಮಾಡಿದಾವ್. ೮ ಮಹಿನಾದ್ದು ಬಡ್ಡಿದೇವ್.

ನಾಗಪ್ಪಃ— ಎಂಟು ತಿಂಗಳ ಬಡ್ಡಿ ಎಷ್ಟಾಗತಯ್ತಿ ? ಹೇಳಿ ಬಿಡ. ಕೊಟ್ಟು ಬಿಡತೇನಿ. ಗೋವಾದಾಗರೆ ಹೋಗು. ಇಲ್ಲದಿದ್ರ ಗೋಸಾವಿ ಅರೆ ಆಗು.

ಗಟ್ಟುಲಾಲಃ— ಮಹಾನಾಕ್ಕೆ ಆಟರೂಪಾಯಿ ಎಂಟ ಮಹಿನಾದ್ದು ಆಟ ಆಟ ಚೋರ್‍ಯಾಅಂಶಿ. ಹತ್ತು ರೂಪಾಯಿ ಸೂಟಲೀವ ಚೊರ್‍ಯಾಣವು ಹುವಾ ದೇವ ಸೂಟ ಕೊಟ್ಟಿದಾವ ಭಾಯಿ. ನೀವು ರೈತಾಮಂದಿ ನಮ್ಮ ಭಾಯಿ ಸಮಾನ ಏನ್.

ವಸಂತರಾವ:— ನಾಗಪ್ಪಾ ಹಾಗೆ ಮಾಡಕೂಡದು. ಮಹಾತ್ಮರ ವಚನವನ್ನು ಮನ್ನಿಸಿ ಸತ್ಯ, ಅಹಿಂಸೆ, ಶಾಂತತೆಗಳನ್ನು ಕೃತಿಯಲ್ಲಿ ತರಲೇಬೇಕು. ಸ್ವತಂತ್ರ ಭಾರತದಲ್ಲಿ ಅವಿಚಾರವನ್ನು ಯಾರೂ ಮಾಡಕೂಡದು. ಶಾಂತನಾಗು ಸೇಠಜೀ ನೀವು ಹೋಗಿರಿ. ನಾಗಪ್ಪನ ಲೆಖ್ಖವನ್ನು ನಾನು ಬಂದು ತೀರಿಸುತ್ತೇನೆ.

ಗಟ್ಟುಲಾಲ:— ಜೀ ಗೋಪಾಲ [ಅಂದು ನಾಗಪ್ಪನ ಕಡೆ ನೋಡುತ್ತಾ, ಓಡಿ ಹೋಗುತ್ತಾನೆ.]

ನಾಗಪ್ಪ:— ಧನ್ಯಾರ ನೀವು ನಡವಬಿದ್ದ ತಪ್ಪಿಸಿದಿರಿ ನೋಡ್ರಿ. ಒಂದ ಏಟ ಕುಡತಿದ್ನ ಅಂದ್ರ ಅವನ ಜೀಗೋಪಾಲ ಜಿಗದ ಬೀಳತಿದ್ದಾ, ತಿಂದ ಬಡ್ಡಿಯೆಲ್ಲಾ ಕಾರಕೋತಿದ್ದಾ.

ವಸಂತರಾವ:— ಹಾಗೆ ಅವಿಚಾರ ಮಾಡಬಾರದು ಎಲ್ಲ ತಪ್ಪು ನಿಮ್ಮ ಕಡಗಿದೆ. ಆವರ ಹತ್ತರ ಸಾಲ ತರುವದು ಮೊದಲನೇ ತಪ್ಪು. ನೀವು ಅಶಿಕ್ಷಿತರಾಗಿರುವಿರಿ ಇದು ಎರಡನೇ ತಪ್ಪು ಸುಶಿಕ್ಷಿತರಾಗಿರೆಂದು ಹೇಳುತ್ತಿದ್ದರೂ ಅಲ್ಲಗಳೆಯುತ್ತಿರುವಿರಿ ಇದು ಗುಡ್ಡದಂಥ ತಪ್ಪು. ಕಲಿತವರಿಗೆ ಅವರು ಹೀಗೆ ಹೆಚ್ಚಿಗೆ ಹೇಳುವ ಧೈರ್ಯವಾಗುವದಿಲ್ಲ. ನಿಮ್ಮ ಅಶಿಕ್ಷಿತತನವ ಪರಿಣಾಮವಿದು. ಅದಕ್ಕಾಗಿ ಕಲಿಯಿರಿ. ಕಲಿತು ಲಾಭ ಪಡೆಯಿರಿ.

ನಾಗಪ್ಪ:— ನೀವ ಹೇಳೋದೆಲ್ಲಾ ತಿಳಿತೇತಿ ಆದ್ರ ಕಲಿಯೋದ ಹ್ಯಾಂಗಾ ? ನಮುಗ ಕಲಸವರ ಯಾರಾ ? ಆತಲ್ಲಾ ನಮುವ ಬಾಳೆವಾ, ಕುಳ್ಳ ಹೋಗಿ ಹೊಳಿಮ್ಯಾಲ ಬಿದ್ದಿದಾವ ? ಇನ್ನ ಕಲತ ಮಾಡೋದ್ಯಾನಾ ?

ವಸಂತರಾವ:— ಇಷ್ಟು ದಿನ ಆದದ್ದಾಯಿತು. ಲೋಕರಾಜ್ಯದಲ್ಲಿ ಅಶಿಕ್ಷಿತರಾಗಿ ಯಾರೂ ಇರಕೂಡದು. ಪ್ರೌಢರಿಗಾಗಿ ಶಿಕ್ಷಣ ಕೊಡಲಿಕ್ಕೆ ಲಕ್ಷಾವಧಿ ರೂಪಾಯಿಗಳನ್ನು ವೆಚ್ಚ ಮಾಡಲು ಸರಕಾರವು

ಸಿದ್ಧವಿದೆ. ಕಲಿಸಲು ಜನರನ್ನು ನೇಮಿಸಿದೆ. ಇನ್ನು ಮುಂದೆ ಹೆಬ್ಬಟ್ಟು ಊರುವರನ್ನು ಊರ ಬಿಟ್ಟು ಹೊರಗೆ ಹಾಕುತ್ತಾರೆ. ನಿಮ್ಮೆಲ್ಲರಿಗೆ ಜುಲುಮೆಯಿಂದ ರಾತ್ರಿ ಶಾಲೆಗೆ ಬರುವಂತೆ ಕಾಯದೆ ಮಾಡುತ್ತಾರೆ. ಕಲಿಯಿರಿ, ಪ್ರೌಢರೇ ಕಲಿಯಿರಿ. ನಿಮ್ಮ ಕಾಲು ಬಿದ್ದು ಹೇಳುತ್ತೇನೆ. ಪ್ರೌಢ ಅಶಿಕ್ಷಿತರೇ ಕಲಿತು ಜಾಣರಾಗಿರಿ. (ಎಂದು ಕಾಲು ಹಿಡಿಯುತ್ತಾನೆ.)

ನಾಗಪ್ಪ:— ಛೇ, ಛೇ, ಇದ್ಯಾಕ ಮಾಡತೀರಿ, ಧನ್ಯಾರ ನೀವು ಇಷ್ಟ ಹೇಳತೇರಿ ಅಂದ ಬಳಿಕ ನಾವ ಕೇಳದಿದ್ರ ಮನಶೇರ ಯಾನ್ ದನಾ ? ನಮ್ಮ ಸಲುವಾಗಿ ಇಷ್ಟ ಕಳಕಳಿ ತೋರಸತೀರಿ ಅಂದ ಬಳಕ ನಾವ ಕಲಿಲಾಕ ತಯಾರ ಇದೇವ. ಆದ್ರ—

॥ ಪದ ॥

ನಾವು ಹ್ಯಾಂಗ ಕಲಿಬೇಕಸಾಲಿ ।
ಕಲಿಲಾಕ ಯಾಕ ಬಲಝಾಲಿ ॥
ಮೊದಲಿನಿಂದ ನಮ್ಮ ವಹಿವಾಟಾ ।
ಕಬಲಾಯತಿಗೆ ಒತ್ತುದ ಈ ಬಟ್ಟಾ ॥ ೧ ॥
ಕಾಂಗ್ರೇಸ ರಾಜ್ಯ ಬಲ್ ಪಾಸಾ ।
ಕಲಿಯೋದ ಹಚ್ಚಿದಾರ ತ್ರಾಸಾ ॥ ೨ ॥

ವಸಂತರಾವ:— ನೀವು ಕಲಿಯಲಿಕ್ಕೆ ಪ್ರಾರಂಭಿಸಿರಿ. ಮೊದಮೊದಲು ಬಿಗಿಯೆನಿಸಿದರೂ ತಿಂಗಳೊಪ್ಪತ್ತಿನಲ್ಲಿ ಅಕ್ಷರ ಜ್ಞಾನವಾಗುತ್ತದೆ. ಮುಂದೆ ನೀವಾಗಿ ಕಲಿಯಲು ಹವಣಿಸುತ್ತೀರಿ.

ನಾಗಪ್ಪ:— ನಮಗ ಏನೇನ ಕಲಸತಾರು ?

ವಸಂತರಾವ:— ಓದು ಬರಹ, ಲೆಖ್ಖ, ಪತ್ರ ಇಡುವದೂ, ಸೋಸಾಯಿಟಿ, ರಾಜ್ಯಕಾರಭಾರದ ಮಾಹಿತಿ, ಬೇನೆ ಬೇಸರಿಕೆಗಳು

ಹೇಗೆ ಬರುತ್ತವೆ? ಗ್ರಾಮ ಸುಧಾರಣೆ ಇತ್ಯಾದಿ ಎಲ್ಲ ಶಿಕ್ಷಣ ಕೊಡುತ್ತಾರೆ.

ನಾಗಪ್ಪ:— ತಗಾಯಿ ತಗೋಳು ಅರ್ಜಿ ಮಾಡಾಕ ಕಲಸ ತಾರೇನ ?

ವಸಂತರಾವ:-- ಓಹೋ ಅವಶ್ಯವಿದ್ದ ಎಲ್ಲ ಸಂಗತಿಗಳ ಜ್ಞಾನ ಮಾಡಿಕೊಡುತ್ತಾರೆ. ನಿಮ್ಮ ಮನರಂಜನೆಗಾಗಿ ರೇಡಿಓ, ಮ್ಯಾಜಿಕ ಲ್ಯಾಂಟರ್ನ ಸಿನೇಮಾಗಳನ್ನು ಸಹ ತೋರಿಸುತ್ತಾರೆ ಅದಕ್ಕಾಗಿ ಪ್ರೌಢರ ಶಾಲೆಗೆ ಅನುಕೂಲತೆ ಪ್ರಕಾರ ಹೋಗಿ ಕಲಿಯಿರಿ. ಮರೆಯಬೇಡಿರಿ.

ನಾಗಪ್ಪ:— ನೀವ ಹೇಳಿದ್ರೆಲಾ ರೊಡ್ಡ ಎ? ಓ ಅಂತಾ ಪೆಟಗಾಗ ಕೂತ ಯಾನ ಒದರತಾರಿ ಅಂತ್ರಾ. ಬಲಾ ಘಸಿನೋಡ್ರಿ ಕೌಜಲಗಿ ನಿಂಗವ್ವನ ಮ್ಯಾಲನೋಡ್ರಿ ಮೊನ್ನಿ ಮ್ಯಾಲತೀನ ಓಸ್ಯಾಗ ಹಚ್ಚಿದ್ರು ಕೆಳಗಡೆ ಓಣ್ಯಾಗ ಸಪಷ್ಟಕೇಳಿತ ನೋಡ್ರಿ.

ವಸಂತರಾವ:— ಪೆಟ್ಟಿಗೆಯಲ್ಲಿ ಹಾಡುವವರು ಕೂತಿರುವದಿಲ್ಲ. ಮುಂಬಯಿ, ದಿಲ್ಲಿ, ಧಾರವಾಡಗಳಲ್ಲಿ ಅವರು ಹಾಡುತ್ತಾರೆ. ಅಥವಾ ಮಾತಾಡುತ್ತಾರೆ. ಅದು ಇಲ್ಲಿ ನಮಗೆ ಕೇಳಿಸುತ್ತದೆ ಇವೆಲ್ಲ ಸಂಗತಿಗಳನ್ನು ನೀವು ರಾತ್ರಿ ಶಾಲೆಯಲ್ಲಿ ಕಲಿಯುವಿರಿ. ಅವಕ್ಕಾಗಿ ಅಶಿಕ್ಷಿತ ಪ್ರೌಢರೇ ನೀವೆಲ್ಲರೂ ಕಲಿಯಿರಿ.

ನಾಗಪ್ಪ:— ನೀವಿನ್ನ ಹೇಳಬ್ಯಾಡ್ರಿ. ನಾ ಕಲಿಯೋವ ನಿಶ್ಚೇವ ಮಾಡಿದ್ನಿ. ತಪ್ಪಿದರ ಕೇಳ್ರಿ. (ಹೋಗುತ್ತಾರೆ.)

---

೩ ನೇ ದೃಶ್ಯ

(ಲಕ್ಷವ್ವನ ಮನೆ, ಸುಶೀಲೆ ಪ್ರವೇಶಿಸುತ್ತಾಳೆ.)

ಲಕ್ಕವ್ವ:— ಬರ್ರಿ, ಸುಶೀಲಾಬಾಯಿ, ಬಡೂರ ಮನಿಗೆ ಬರಾಣಾತು. ಹಾದಿ ತಪ್ಪಿ ಬಂದ್ರ್ಯೇನ, ಏನ ಹಾಲ ಬೇಕಾಗಿತ್ತೋ?

ಸುಶೀಲೆ:— ಹಾಗೇನೂ ಇಲ್ಲ. ನಿಮ್ಮಂಥವರಿಗೆ ಭೆಟ್ಟಿಯಾಗಿ ಮಾತಾಡಲು ಬಂದಿದ್ದೇನೆ.

ಲಕ್ಕವ್ವ:— ನೀವ ಕಲಿತ ಹೆಂಗಸರ, ಸಭಾದಾಗ ನಿಂತ ಸಪಷ್ಟ ಮಾತಾಡವರ, ಗಂಡಸನ್ಹಂಗ ನಾಯಕಲ್ಲ ವ್ಯಾಗ ಕೂತ ತಿರುಗಾಡಾವ್ರ, ನಮಗ ನಿಮಗ ಯಾವ ಊರ ಹಾದಿ?

ಸುಶೀಲೆ:— ನೀನನ್ನುವದು ನಿಜ ಆದರೂ ನೀನೂ ನಮ್ಮಂತೆ ಕಲಿಯುತ್ತಿದ್ದರೆ ನಿನಗೂ ಇವೆಲ್ಲ ಬರುತ್ತಿತ್ತು. ನೀನು ಕಲಿಯಲಿಲ್ಲ. ಉಪಾಯವಿಲ್ಲ ಇನ್ನಾದರೂ ಓದು ಬರೆಯಲು ಕಲಿಯಬೇಕೆಂದು ಹೇಳಲು ಬಂದಿದ್ದೇನೆ.

ಲಕ್ಕವ್ವ:— ಅವ್ವಾ, ತಾಯಿ, ನಮ್ಮದ ಜಾತ್ರಿ ಮುಗದಯ್ತಿ? ದನಾ, ಕರಾ, ಅಡಿಗಿ, ಅಂಬಲಿ, ಮಾಡಲಿ ಯಾವಾಗ, ಮತ್ತ ನಿನ ಸಾಲಿ ಕಲಿಲಿ ಯಾವಾಗ? ಇನ್ನ ಕಲತ ನಾಯೆಲ್ಲಿ ಅಕ್ಕವ್ವ ಆಗೋದಯ್ತಿ?

ಸುಶೀಲೆ:- ಅಕ್ಕವ್ವ ಆಗಲಿಕ್ಕೇನೆ ಕಲಿಯುವದಿರುವದಿಲ್ಲ. ಹೆಂಗಸರು ಸುಶಿಕ್ಷಿತರಿದ್ದರೆ ಅವರ ಮಕ್ಕಳು ಸುಶಿಕ್ಷಿತರಾಗುತ್ತಾರೆ. ಸಂಸಾರವು ಸರಿಯಾಗಿ ನಡೆಯುತ್ತದೆ. ಅಶಿಕ್ಷಿತರ ಸಂಸಾರವು ಹದಗೆಡಲಿಕ್ಕೆ ಅಶಿಕ್ಷಿತತನವೇ ಕಾರಣ, ನಿನ್ನ ಗಂಡನೆಲ್ಲಿದ್ದಾನೆ?

ಲಕ್ಕವ್ವ:— ಗಂಡ? ಎಲ್ಲಿ ಗಂಡ? ಓಳದು ಗುಂಡ ಆಗ್ಯಾನ? ಮನಿ ಖಬರಿ ಇದ್ರ ಅಲ್ಲಾ? ಎಲ್ಲಿರೆ ಬಿದ್ದಾದಾನ ಮೋಡಿ?

ಸುಶೀಲೆ:— ಗಂಡನಿಗೆ ಮೋಡಿ, ಗೇಡಿ ಎಂದು ಅನ್ನಬಾರದು.

ಪತಿಯೇ ಸ್ತ್ರೀಯರಿಗೆ ಪರಮೇಶ್ವರ, ಪತಿಯಿಂದಲೇ ಸತಿಯರ ಉದ್ಧಾರ ಪತಿ ಪರಾಯಣಳಾದವಳೇ ಸತಿ, ಎಂದು ಸಾರುತಿವೆ ಸ್ಮೃತಿ.

ಲಕ್ಕವ್ವ:— ನನ್ನ ಗಂಡ ಕುಡಿತಾನು. ಮನಿಗಿ ಬಂದ ಜಗಳಾ ತಗಿತಾನು. ಹಿಂಗ್ಯಾಕ ಅನ್ನೋದ ತಡಾ ಹಾಕಾಕಿ ಬಡಿತಾನು. ಏನ ಮಾಡ್ಲಿ? ಸುಶೀಲಾಬಾಯಿ ನನ ಬಾಳ್ವೆ ಹೇಳುದ ಅಂದ್ರ ನಾಚಿಕಿ ಬರತಯ್ತಿ [ಕಣ್ಣೀರು ತಂದು ಸೆರಗಿನಿಂದ ಒರಿಸ ಹತ್ತುತ್ತಾಳೆ.]

ಸುಶೀಲೆ:— ಪಾಪ! ಅಳಬೇಡ. ಅಶಿಕ್ಷಿತತನವಿದ್ದಲ್ಲಿ, ಶರೆ ಸಿಂದಿಗಳ ವ್ಯಸನ ಹತ್ತುತ್ತದೆ. ಈಗ ಸರಾಯಿ ಕುಡಿಯಬಾರದೆಂದು ಕಾಯಿದೆಯಾಗಿದೆ. ಶರ ಅಂಗಡಿಗಳು ನಾಶವಾಗಿವೆ. ಹೀಗಿದ್ದು ಹೇಗೆ ಕುಡಿಯುತ್ತಾನೆ?

ಲಕ್ಕವ್ವ:— ಏನ ಹೇಳಬೇಕರಿ? ನಿಮಗ ಹೇಳಿದ್ರು ಸುಳ್ಳ ಅನಸೀತು. ಪರ ಒಂದ ಊರಾಗ ಭಟ್ಟಿ ಶರಿ ಶಿಗತಯ್ತಿ. ಕಾಯಿದೆ ಆದಾಗಿಂದ ಶರೆ ಮಾಡೋದ ಒಂದ ಕೆಲಸ ಆಗೇತಿ. ಸರಕಾರ ಛಲೋ ಮಾಡಿದ್ರು! ಅದನ್ನ ಕೆಡಸಾಕ ಸಾವಿರ ಮಂದಿ ಸೈತಾನರ ಹುಟ್ಟಿದಾರ! ಅವರಿಗೆಲ್ಲಿ ಮುಂತೇತಿ ಯಾರಿಗೆ ಗೊತ್ತ (ಕೈ ಬೆರಳು ಮುರಿಯುತ್ತಾಳೆ.)

ಸುಶೀಲೆ:— ಕಳ್ಳ ಶರೆ ಮಾಡುವವರನ್ನೂ, ಕುಡಿಯುವವರನ್ನೂ ಶಿಕ್ಷಿಸಲಿಕ್ಕೆ ನಮ್ಮ ಸರಕಾರವು ಸಿದ್ಧವಿವೆ. ನೀನು ಚಿಂತಿಸಬೇಡ. ನಿನ್ನ ಗಂಡನಿಗೆ ಸವಿ ಮಾತಿನ ಉಪದೇಶದಿಂದ ಆ ದುಶ್ಚಟದಿಂದ ಮುಕ್ತಮಾಡು. ಆತನನ್ನು ರಾತ್ರಿ ಶಾಲೆಗೆ ಹೋಗಲಿಕ್ಕೆ ಹೇಳು.

ಲಕ್ಕವ್ವ:— ಹೊತ್ತ ಮುಳುಗುದ ತಡಾ. ಸುದ್ದಿ ಮ್ಯಾಲ ಇರೋದ ಇಲ್ಲಾ. ರಾತ್ರಿ ಸಾಲಿಗಿ ಏನ ಹೋಗತಾನು?

ಸುಶೀಲೆ:— ಅದಿರಲಿ. ವಸಂತರಾಯರಿಗೆ ಹೇಳಿ ಅವನ ವ್ಯವಸ್ಥೆ ಮಾಡಿಸುತ್ತೇನೆ. ನೀನು ಚಿಂತಿಸಬೇಡ.

ಲಕ್ಕವ್ವ:— ಚಿಂತಿ ಮಾಡಿ ಮಾಡಿ ಸಾಕಾಯಿತ. ಏನ ಮಾಡ ಬೇಕ ಇದ ತಿಳಿದಾಂಗ ಆಗೇತಿ. ನನ್ನು ಮ್ಯಾಲ ದ್ಯಾವರ ಎಂದ ಕಿರಪೆ ಮಾಡತಾನೋ ಮಾಡಲಿ. (ನೋಡಿ) ಆವ ನೋಡ್ರಿ ನನ್ನ ಗಂಡ ಬಂದ ನೋಡ್ರಿ! (ಕುಡಕಪ್ಪನು ಪ್ರವೇಶಿಸುತ್ತಾನೆ.)

ಕುಡಕ:— ಲಕ್ಕೀ, ಎಲ ಲಕ್ಕಿ, ನಾ ಇಂದಿನಿಂದ ಬಿಟ್ನೆ, ಕುಡಿ ಯೋದ ಪುರ್ತಾ ಪೂರಾ ಬಿಟ್ನೆ ಲಕ್ಕಿ, ತಿನಾಕ ಮಾಡ ಬಿಸಿ ಅವಲಕ್ಕಿ!

ಲಕ್ಕವ್ವ:— [ಆನಂದದಿಂದ] ಅವು, ಅವು, ನನ ಜೀವದ ಜೆಟ್ಟಿ? ಕುಡಿಯೋದ ಬಿಟ್ಟ. ಈ ಮಾತ ಗಟ್ಟಿ? ಹೇಳ ನನಕೊಳ್ಳರ ಗಟ್ಟಿ.

ಕುಡಕ:— ಲಕ್ಕೀ, ಖರೇ, ನೂರಬಾರಿ ಖರೇ, ನಿನ್ನ ಕೊರ ಳಾಣಿ ಮಕ್ಕಳ ಮರಿ ಆಣಿ, ಶಿವನಾಣಿ ಕೊಟ್ಟ ಹೇಳತೇನಿ ಇಂದಿನಿಂದ ಶರೆ ಕುಡಿಯೋದ ಬಿಟ್ಟ ಬಿಟ್ಟನೈೀನೆ.

ಲಕ್ಕವ್ವ:- ಸುಶೀಲವ್ವನವರೇ, ನೀವ ದೇವತಿ ಹಾಂಗ ನನ ಮನಿಗಿ ಬಂದ್ರಿ, ನನ ಗಂಡಗ ಬುದ್ಧಿ ಬಂತು. ನನ ಸಂಸಾರಕ ಜೀವಕಳಿ ಬಂತು.

ಕುಡಕ:— ಸುಶೀಲಾಬಾಯಿಯವರೇ, ನನಗೆ ವಸಂತರಾ ಯರು ನಿಜವಾದ ಬಾಳಿನ ಬೆಳಕು ತೋರಿಸಿದರು. ನಾನು ಕುಡಿಯೋ ದನ್ನು ಬಿಟ್ಟೆನು. ಕುಡಕರಿಗ ಕುಡಿ ಬ್ಯಾಡ್ರಿ ಅಪ್ಪಾ ಎಂದ ಹೇಳತ ತಿರಗ್ಯಾಡಾಂವ, ಭಟ್ಟಿಗಳನ್ನು ಹುಡುಕಿ ತಗದ ಪೋಲೀಸರಿಗೆ ಬಾತಮಿ ಕೊಡಾವ. ಇನ್ನ ಮುಂದ ನಾ ರಾತ್ರಿ ಸಾಲಿಗಿ ಹೋಗಿ ಓದ ಬರ್‍ಯಾಕ ಕಲಿತೇನ.

ಸುಶೀಲಾ:— ಶಾಬಾಸ್ ಕುಡಕಣ್ಣಾ, ನಿನ್ನಂತೆ ಎಲ್ಲರೂ ಮನೋ ನಿಶ್ಚಯ ಮಾಡಿದಲ್ಲಿ ನಮ್ಮ ನಾಡಿನಲ್ಲಿ ನಿರಕ್ಷರತೆ, ಹಾಗೂ ಕುಡುಕತನದ ಹಾಳು ಚಟಗಳು ಹಾಳಾಗಿ ಹೋಗುತ್ತೇವೆ.

ಲಕ್ಕವ್ವ:— ಸುಶೀಲಾಬಾಯಿ, ನಾನೂ ನಿಮ್ಮ ಮನೆಗೆ ಬಂದು ಸವಡು ಮಾಡಿಕೊಂಡು ಓದಾಕ ಬರ್‍ಯಾಕ, ಕಲಿಬೇಕ ಅಂತ ಮಾಡೇನ.

ಸುಶೀಲಾ:— ಕಲಿಯಿರಿ, ಕಲಿಯಿರಿ, ಅಶಿಕ್ಷಿತ ಸ್ತ್ರೀ ಪುರುಷ ರೆಲ್ಲರೂ ಕಲಿಯಬೇಕೆಂದೇ ಸಮಾಜ ಶಿಕ್ಷಣದ ಉದ್ದೇಶ, ಇಂದು ನಿಮ್ಮೆಲ್ಲರ ಮನೋ ನಿಶ್ಚಯದಿಂದ ನನಗೆ ಆನಂದವಾಯಿತು. ಈ ಆನಂದದಲ್ಲಿ ಸ್ವಾತಂತ್ರ್ಯದ ಜೋಗುಳ ಹಾಡುತ್ತೇನೆ.

॥ ಪದ ॥ ಜೋಗುಳ

ಗಾಂಧಿ ಮಹಾತ್ಮರು । ತೋರಿದ ಚಿತ್ರ ॥
ಭಾರತಮಾತೆ ಪಡೆದಾಳೋ । ಪುತ್ರ ॥
ಸ್ವಾತಂತ್ರ್ಯ ಶಿಶು । ತೂಗೋಣ ಬರ್‍ರಿ । ಜೋ ಜೋ ಜೋ
ಜೋ । ಬಾಳಾ । ಜೋ ॥ ಪಲ್ಲ ॥

ದೇಶದ ಏಳ್ಗೆ ಹೊತ್ತಾರು ನೇಹರು ।
ದಾಸನಾಗಿ ನಿಂತ ಬಲ್ಲಿದರು ॥
ಕ್ಲೇಶ ಪಾಶವ ನಾಶಿಸಿದವರವರು ॥ ೧ ॥ ಜೋ । ಜೋ ।

ಜಾತಿಯ ಭೂತ ಓಡಿಸಿ ಬೇಗ ।
ನೀತಿ ನಿಲಯ ಮಾಡಿದರೀಗ ॥
ಕೀರ್ತಿಯ ಕಳಸ ಮೆರೆಯಿಸಿ ಬೇಗ ॥ ೨ ॥ ಜೋ । ಜೋ ॥

ರಾತ್ರಿಯ ಶಾಲೆ ತೆಗೆದಾರೋ ನೋಡಿ ।
ಖಾತ್ರಿಯ ಮಾಡಿ ಶಿಕ್ಷಣ ಜೋಡಿ ॥
ಅಜ್ಞಾನವು ಹೋಯಿತು ಓಡಿ ॥ ೩ ॥ ಜೋ । ಜೋ ॥

(ಪದ ಮುಗಿದ ಕೂಡಲೇ)

ಸುಶೀಲೆ— ಒಳ್ಳೇದು ನಾನೂ ಹೋಗುತ್ತೇನೆ. ನಾಳೆಯಿಂದ ನೀವಿಬ್ಬರೂ ರಾತ್ರಿ ಶಾಲೆಗೆ ಬರ್‍ರಿ! ಓದು ಬರೆಯಲು ಕಲಿಯಿರಿ.

ಇಬ್ಬರೂ— ಹೂನ್ರಿ? ತಪ್ಪದೆ ಬರತೀವಿ.

(ಪರದೆ ಬೀಳುತ್ತದೆ)

---

೪ ನೇ ದೃಶ್ಯ

(ಜಮೀನದಾರರ ಮನೆ)

(ಜಮೀನದಾರರ ಎದುರಿಗೆ ಕಾರಕೂನ ದಿಗಂಬರನು ಕೂತಿದ್ದಾನೆ.)

ಜಮೀನದಾರಃ— (ಸ್ವಗತ) ಕೊಡಲಿ ಕಾವು ಕುಲಕ್ಕೆ ಮೂಲ ಎಂಬಂತೆ ನಮ್ಮ ಜನರ ಕೈಯಲ್ಲಿ ರಾಜ್ಯ ಕಾರಭಾರ ಬಂದು ನಮ್ಮನ್ನೇ ಕೊಲ್ಲಹತ್ತಿದ್ದಾರೆ. ಈ ಕಾಂಗ್ರೇಸಿಗರೆಂದರ ಪ್ರತ್ಯಕ್ಷ ದರೋಡೆಗಾರರಾಗಿದ್ದಾರೆ. ರೈತನನ್ನು ಎತ್ತಿಹಿಡಿದು ಜಮೀನದಾರರನ್ನು ಬೋಳಿಸಹತ್ತಿದ್ದಾರೆ. ಈ ಜನರ ಕೈಯಲ್ಲಿ ಕಾರಭಾರ ಹೋದದ್ದರಿಂದ ಇಂಥ ಬಿಲ್ಲು ಬಾಣಗಳು ಹೊರಬೀಳಹತ್ತಿವೆ. (ದಿಗಂಬರ ಪ್ರವೇಶಿಸಿ)

ದಿಗಂಬರಃ— ಯಜಮಾನರೇ ಆ ಒಂಟಿಮೋತಿ ಕಂಟಪ್ಪನು ಹೊಲದ ಕಬಜಾ ಬಿಡಲಿಕ್ಕೆ ತಯಾರಯಿಲ್ಲಾ. ಖಂಡಿನ ಹಣಾ ಕೊಡುವದಿಲ್ಲ ? ಪಾಲಿಗೆ ಬಂದಷ್ಟು ಧಾನ್ಯ ಕೊಡುತ್ತೇನೆಂದು ಹೇಳಿದನು

ಜಮೀನದಾರಃ— ಅವರಾತಕೆ ಕೊಡುತ್ತಾರೆ ? ಅವರು ಕೊಡಲಿಕ್ಕೆ ಸಿದ್ಧರಿದ್ದರೂ ಕೊಡಬೇಡಿರೆಂದು ಹೇಳಲಿಕ್ಕೆ ಬಿಳೇ ಟೊಪ್ಪಿಗಿ ಬಾದ್ದರರು ಅನೇಕರಿರುವರಲ್ಲ. ಆಗಲಿ ಇದಕ್ಕೇನು ಉಪಾಯ ?

ದಿಗಂಬರಃ- ಉಪಾಯವೇತರದು ? ಜಮೀನ ಕಬಜಾಬಿಟ್ಟ ಬಗ್ಗೆ ಕುಳಗಳು ಸ್ವತಾ ರಾಜೀನಾಮೆ ಕೊಡಬೇಕಾಗುತ್ತದೆ. ಅದರಂತೆ ಆ ಕಂಟಪ್ಪನಿಗೆ ಕಬುಲಾಯತಿ ಕೊಡು ಎಂದು ಹೇಳಿ ರಾಜೀನಾಮೆ ಬರೆಯುತ್ತೇನೆ. ಅಶಿಕ್ಷಿತ ರಂಡೇಮಗಾ ಹೆಬ್ಬೆಟ್ಟ ಒತ್ತಿ ಹೋಗುತ್ತಾನೆ. ಮಾಮಲೇದಾರರ ಕಚೇರಿ ನಾವೇ ಕಳಿಸಿದರಾಯಿತು. ಓನಸ್ಸಿ ಮಾಮಲೇದಾರರಿಗೆ ಮೇಜವಾನಿಕೊಟ್ಟು ಕೆಲಸ ಮುಗಿಸುವಾ.

ಜಮೀನದಾರಃ— ಶಾಬಾಸ, ಇದಕ್ಕನ್ನಬೇಕು ತಲೆ ? ನಿನ್ನ ಜಾಣತನಕ್ಕೆ ಚರ್ಚಿಲ ಸಾಹೇಬರೂ ಕಡಿಮೆಯೇ ಸರಿ. ನೀನೂ ಬಿಳೇಟೊಪ್ಪಿಗೆಯನ್ನೇ ಹಾಕುವಿಯಲ್ಲಾ ?

ದಿಗಂಬರಃ-- ಬಿಳೇಟೊಪ್ಪಿಗೆಗೆ ಬೆಲೆಕಡಿಮೆ ದೊಡ್ಡಿಸ್ತನ ಹೆಚ್ಚು. ಇಷ್ಟಾಗಿ ಬಿಳೇಟೊಪ್ಪಿಗೆ ಹಾಕಿಕೊಂಡು ಬೇಕಾದ ಅನ್ಯಾಯ ಮಾಡಿದರೂ ಯಾರೂ ಹೆಸರಿಡುವದಿಲ್ಲ. ಈಗಿನ ದಿನವಲ್ಲಿ ಬಿಳೇ ಟೊಪ್ಪಿಗೆ ಬುಡವಲ್ಲಿ ಬೇಕಾದ ಕೃಷ್ಣಕಾರಸ್ಥಾನಗಳಿವೆ. ಅದೋ ಕಂಟಪ್ಪನು ಬಂದನು. ಅವನನ್ನು ಹಿಂದಿನ ಪಡಸಾಲೆಗೆ ಕರೆದು ಕೊಂಡು ಹೋಗಿ ಕೆಲಸ ಮುಗಿಸುತ್ತೇನೆ. (ಹೋಗುತ್ತಾನೆ.)

ಜಮೀನದಾರಃ— ಈ ಕಾಂಗ್ರೇಸ ರಾಜ್ಯದಾಡಳಿತದಲ್ಲಿ ಜಮೀನದಾರರ ಮನೆಯ ಮೇಲೆ ನೇಗಿಲ ಹೂಡಿವೆ. ರೈತ ರಂತೂ ಮೇರೆದಪ್ಪಿ ಸೊಕ್ಕಿಗೆ ಬಂದಿರುವರು. ಕೂಲಿಕಾರರಂತೂ ಕೆಲಸ ಮಾಡದೆ ಸಂಬಳ ಬೇಡುತ್ತಿರುವರು. ಇಷ್ಟ ಭೂಮಿಗ ಳನ್ನು ಮಾರಿ ಬಿಡಬೇಕೆಂದರೆ ಅದಕ್ಕೂ ತೊಂದರೆ. ಈ ಅಶಿಕ್ಷಿತರ ನ್ನೆಲ್ಲ ಸುಶಿಕ್ಷಿತ ಮಾಡಹತ್ತಿದ್ದಾರೆ. ಅದಾದಬಳಿಕ ನಮ್ಮದೆಲ್ಲ ಮುಗಿಯಿತು. ಅಂತೂ ನಮಗೆ ಯಾವತರಹೋಪಾಯವೂ ತೋರ ದಾಗಿದೆ. [ವಸಂತರಾವ ಪ್ರವೇಶಿಸುತ್ತಾನೆ.]

ವಸಂತರಾವಃ— ನಮಸ್ಕಾರ ಜಮೀನದಾರರೇ ಏನು ನಡೆದಿದೆ ?

ಜಮೀನದಾರಃ— ನಡೆಯುವದೇನಿದೆ ? ಕಾಂಗ್ರೇಸಿನ ಹೆಸ ರಿನಿಂದ ಶಂಖನಡೆದಿದೆ. ಮಹಾತ್ಮರ ಕಡಗೆ ನೋಡಿ ಹೋಟು ಕೊಟ್ಟೆವು. ಆರಿಸಿಬಂದು ನಮ್ಮನ್ನು ನುಂಗಲು ನಿಂತಿರುವಿರಿ ?

ವಸಂತರಾವಃ— ಕಾಂಗ್ರೇಸಿಗರು ಏನು ಮಾಡಿದರು ? ಕಾಂಗ್ರೇ ಸಿಗರ ಕೈಯಲ್ಲಿ ಭಾರತವನ್ನೇಕೊಟ್ಟು ಬ್ರಿಟಿಶರು ಹೋದರು ನೀವು ಶಂಖ ಹೊಡೆದರೇನು ಉಪಯೋಗ ?

ಜಮೀನದಾರ:— ನೀವು ಕಾಂಗ್ರೇಸಿಗರೆಂದರೆ, ಹೊಲ ಇಲ್ಲ, ಮನೆಯಿಲ್ಲ, ವತನವಿಲ್ಲದವರೇ ಎಲ್ಲರು! ಅಂತೇ ಇಂಥ ಕಾಯದೆ ಗಳನ್ನು ಮಾಡಹತ್ತಿರುವಿರಿ.

ವಸಂತರಾವ:— ಜಮೀನದಾರರೇ ಹಾಗೆನ್ನಬೇಡಿರಿ. ಪಂ. ಜವಾಹರಲಾಲರ ಸಂಪತ್ತಿನ ಲೆಖ್ಖವು ಸಾಮ್ರಾಜ್ಯಸರಕಾರಕ್ಕೆ ಸಹ ಗೊತ್ತಾಗಲಿಲ್ಲ. ಜಮನಾಲಾಲ ಬಜಾಜರು ೫೦,೦೦೦ ರೂ. ಕಾಂಗ್ರೇಸಿಗೆ ಫಂಡವೆಂದು ಸಲ್ಲಿಸಿದ್ದಾರೆ. ವಲ್ಲಭಭಾಯಿ ಪಟೇಲರು ಲಕ್ಷಾಂತರ ರೂಪಾಯಿಗಳನ್ನು ಕಾಂಗ್ರೇಸಿಗಾಗಿ ವೆಚ್ಚಮಾಡಿದ್ದಾರೆ. ದೇಶಗೌರವ ಸುಭಾಷಚಂದ್ರ ಬೋಸರ ಕೊರಳೊಳಗಿನ ಒಂದೇ ಒಂದು ಪುಷ್ಪಹಾರವು ೧೧ ಲಕ್ಷ ರೂಪಾಯಿಗೆ ಮಾರಿದೆ. ಇದನ್ನೆಲ್ಲ ವಿಚಾರಿಸಿದರ ನಿಮ್ಮ ಹರಕಮುರಕ ಸಾವುಕಾರಿಕೆ ಯಾವ ಗಿಡದ ತೊಪ್ಪಲು ವಿಚಾರಿಸಿರಿ.

ಜಮೀನದಾರ:— ಟೆನನ್ಸಿ ಬಿಲ್ಲು ಮಾಡಲು ಏನು ಕಾರಣ ಏತ್ತು ?

ವಸಂತರಾವ:— ರೈತರನ್ನು ಉದ್ಧರಿಸುವದೇ ಸದ್ಯದ ಸರ ಕಾರದ ಮುಖ್ಯ ಧ್ಯೇಯವಿದೆ. ಭೂಮಿಯ ಶಾಶ್ವತಿ ಉಳಿಯುವ ಭರ ವಸೆ ರೈತರಿಗೆ ಇದ್ದರ ಚನ್ನಾಗಿ ದುಡಿದು ಉತ್ಪಾದನೆಯನ್ನು ಬೆಳೆಸು ವರು. ಅದಕ್ಕಾಗಿ ಟೆನನ್ಸಿ ಬಿಲ್ಲು ಮಾಡಿದೆ.

ಜಮೀನದಾರ:— ರೈತನು ದುಡಿಯದಿದ್ದರೆ ನಾವೇನು ಮಣ್ಣು ತಿನ್ನುವವೇ?

ವಸಂತರಾವ:— ರೈತನು ದುಡಿಯದಿದ್ದರೆ, ಹೊಲದಲ್ಲಿ ಗೊಬ್ಬರ ಗಳೇ, ಮೊದಲಾದ ಕೆಲಸಗಳನ್ನು ಸರಿಯಾಗಿ ಮಾಡದಿದ್ದರೆ ಅವನ ಕಡೆಯಿಂದ ಹೊಲವನ್ನು ತೆಗೆದುಕೊಳ್ಳಲು ನಿಮಗೆ ಅವಕಾ

ಶವಿದೆ. ಇಷ್ಟೇ ಅಲ್ಲ, ಯಾವ ರೈತನು ಓದಲು ಬರೆಯಲು ಕಲಿಯುವದಿಲ್ಲವೋ ಅಂಥವನಿಗೆ ಭೂಮಿಯನ್ನು ಹಚ್ಚಬಾರದೆಂದು ಯೋಜನೆ ನಡೆದದೆ. ಅದಕ್ಕಾಗಿ ಎಲ್ಲ ಅಶಿಕ್ಷಿತ ಪ್ರಾಢರನ್ನು ಸರಕಾರವು ಸಾಕ್ಷರ ಮಾಡಹತ್ತಿದ್ದಾರೆ

ಜಮೀನದಾರಃ— ಸಾಕ್ಷರ ಮಾಡುವಿರೋ, ರಾಕ್ಷಸ ಮಾಡುವಿರೋ ಮಾಡಿರಿ. ನಾವಂತೂ ಸುಣ್ಣತಿಂದ ಮಂಗನಂತೆ ಬಾಯಿ ಬಿಡಹತ್ತಿದ್ದೇವೆ.

ವಸಂತರಾವಃ— ಸ್ವಲ್ಪ ಸಮಾಧಾನ ತಾಳಿರಿ ಗಾಬರಿಯಾಗಬೇಡಿರಿ. ನೀವೇ ಹೀಗೆ ಅನ್ನುವಿರಿ. ಅಂದ ಬಳಿಕ ಸಂಸ್ಥಾನಿಕರು ಏನು ಅನ್ನಬೇಕು. ಕೊಟ್ಟಷ್ಟೇ ವೇತನವನ್ನು ಸ್ವೀಕರಿಸಿ ಸುಖವಾಗಿರುವರಲ್ಲವೇ? ಇನ್ನು ಮುಂದೆ ಭೂದಾನ ಯಜ್ಞದಲ್ಲಿ ಜಮೀನದಾರರೇ, ಆಹುತಿ! ಅದಿರಲಿ? ಗಾಂಧಿ ಸ್ಮಾರಕ ನಿಧಿಗೆ ನೀವು ಏನು ಕೊಡುವಿರಿ? ನಿಮ್ಮ ಇಚ್ಛೆಯಿದ್ದಷ್ಟು ಕೊಡಿರಿ, ನಮ್ಮದೇನು ಜುಲುಮೆಯಿಲ್ಲ.

ಜಮೀನದಾರಃ— ಮಹಾತ್ಮರ ತತ್ವಗಳು ಅಬಾಧಿತವಾಗಿವೆ. ಇಡೀ ಜಗತ್ತಿಗೆ ಅವರು ಪೂಜ್ಯರಾಗಿದ್ದರು. ಅದಕ್ಕಾಗಿ ಅವರ ಸ್ಮಾರಕಕ್ಕೆ ನಾನು ನನ್ನ ಒಂದು ವರ್ಷದ ಉತ್ಪನ್ನ ಅಂದಾಜು ಐದು ಸಾವಿರ ರೂಪಾಯಿ ಸ್ವಸಂತೋಷದಿಂದ ಕೊಡಲಿಕ್ಕೆ ಸಿದ್ಧನಿದ್ದೇನೆ ಆಹುತಿ ಕೊಡಿರಿ, ಇಲ್ಲವೆ ಮಾರುತಿ ಮಾಡಿರಿ.

ವಸಂತರಾವಃ— ಬೋಲೋ ಭಾರತ ಮಾತಾಕಿ ಜಯ. ಮಹಾತ್ಮಾಗಾಂಧಿ ಮಹಾರಾಜಕೀಜಯ. [ತೆರೆಬೀಳುತ್ತದೆ.]

---

೫ ನೇ ದೃಶ್ಯ.

(ರಸ್ತಾ)

(ಸಾರು ಅಯ್ಯನವರು (ಸ್ವಾಮಿ) ಹಾಡುತ್ತಾ ನಿಂತಿರುತ್ತಾನೆ. ರೈತನು ಬರುತ್ತಾನೆ)

ಸ್ವಾಮಿಃ-

ಶಿಕ್ಷಣ ಪಡೆದು । ರಕ್ಷಣ ಮಾಡಿರಿ । ಸ್ವಾತಂತ್ರ್ಯವನ್ನಾ ॥ ೧ ॥
ಸಾಕ್ಷರರಾಗಿ । ಬೆಳಿಸಿರಿ ಬೇಗಾ । ದೇಶದ ಬಲವನ್ನಾ ॥ ೨ ॥
ಸಾಂಬ ಹರಹರ ಮಹಾದೇವ

ಕಂಟೆಪ್ಪ.— ಸಾಮಿಗೋಳ ಯಾವ ಊರವರ ? ಬಬಲಾದ್ಯಾವರ ಏನ್ ?

ಸ್ವಾಮಿಃ— ನಾವು ಬಬಲಾದ್ಯಾವರ ಅಲ್ಲ, ಶೇಡಬಾಳದವರ ?

ಕಂಟೆಪ್ಪ·— ನಿಮದ ಯಾವ ಮಠಾ ?

ಸ್ವಾಮಿಃ—ನಾವು ಸಾಲಿ ಮಠದವರ, ನಮಗ ಮಠಾ ಮಸೀದಿ ಸವನ ಇದಾವ.

ಕಂಟೆಪ್ಪಃ— ಅಲಿಂಡ ನೀವ ಅಯನವರೋ ' ಏನ್ ಮುಸಲರೋ ?

ಸ್ವಾಮಿಃ— ಸ್ವತಂತ್ರ ಭಾರತದಲ್ಲಿ ಜಾತಿಗಳು ಜಿಗಿದು ಹೋಗಿ, ಒಂದೇ ಒಂದು ಮನುಷ್ಯ ಜಾತಿ ಉಳಿಯಬೇಕಾಗಿದೆ ಹಿಂದೂ ಮುಸಲ್ಮಾನರಲ್ಲಿ ಐಕ್ಯವಾಗಬೇಕಾಗಿದೆ. "ಮಹಾತ್ಮಾಗಾಂಧಿ ಕರೆ ಪುಕಾರ ಹಿಂದೂ ಮುಸಲ್ಮಾನ ಭಾಯಿ ಭಾಯಿ" ಎಂಬ ಕೂಗು ಎಲ್ಲೆಡೆ ಕೇಳಿಸಬೇಕಾಗಿದೆ. ನಾವು ಮಠದಲ್ಲಿ ಉಂಡು ಮಸೀದೆಯಲ್ಲಿ ಮಲಗುತ್ತೇವೆ

ಕಂಟೆಪ್ಪ:— ಈ ವರ್ಷ ಮಳಿ ಬೆಳಿ ಹ್ಯಾಂಗ ?

ಸ್ವಾಮಿ.— ಮುಂಗಾರಿ ಮಳೆ ಆಗಾಕಿಲ್ಲ ಹಿಂಗಾರಿ ಮಳಿ ಚಲೋ ಆಗಿ ಬಿಳಿ ಜೋಳ ಬಿತ್ತಿಗಿ ಆಗತಾವ. ಗೋದಿ, ಕಡ್ಲಿ ಚಲೋ ಪೀಕ ಬರುತ್ತದೆ. ಹತ್ತಿ ಬಿತ್ತಿದವ ಹಾಳಾಗತಾನ, ತಂಬಾಕ ಹಚ್ಚಿದ್ರ ಹಣಾ ಗುಣಾ ಕಳಕೋತಾನ, ಆಹಾರ ಧಾನ್ಯ ಬೆಳಿಸಿದವ ಮೇಲ ಆಗತಾನ.

ಕಂಟೆಪ್ಪಃ— ರಾಜದಾಗ ಲಢಾಯಿ, ಸುಖಾ ದುಖಾ ಧಾರಣೆ ಯಾನ್ಯಾನರೆಪ್ಪಾ

ಸ್ವಾಮಿಃ— ಕಾಶ್ಮೀರ ಕನಸ ಖರೇ ಆಗತೇತಿ. ಹೈದರಾಬಾದ ಹೆದರಿ ಹಿಂದ ಸರಕಾರಕ ಶರಣ ಬರತಯ್ತಿ. ಅರವಿ ವ್ಯಾಲಿನ ಕಂಟ್ರೋಲ ಹೋಗತಯ್ತಿ, ಕಾಳಾ ಬಾಜಾರ ಚಾಲು ಆಗತೇತಿ. ಅಕ್ಕಿ ಧಾರಣಿ ತುಟ್ಟಿ ಆಗತೇತಿ. ಬೆಲ್ಲದ ದರ ಬಿಗಿತಯ್ತಿ. ಅಳ್ಳಿ ಧಾರಣಿ ಮೆತ್ತಗ ಆಗತಯ್ತಿ. ಸಕ್ರಿದರಾ ಸಡಿಲ ಆಗತಯ್ತಿ.

ಕಂಟೆಪ್ಪಃ— ಸಂಕ್ರಾಂತಿ ಹ್ಯಾಂಗ ಆಯ್ತಿ ?

ಸ್ವಾಮಿಃ — ಈ ವರ್ಷ ಸಂಕ್ರಾಂತಿ ಅಶಿಕ್ಷಿತರ ಮೇಲೆ ಕೂತಿದ್ದಾಳೆ. ಕೆಂಪು ಜೋಳದ ರೊಟ್ಟಿ ಗೊಂಜಾಳ ನುಚ್ಚು ತಿನ್ನುತ್ತಾಳೆ. ಸಾಲಿ ಕಡೆ ನೋಡುತ್ತಾಳೆ. ಎಡಗೈಯಲ್ಲಿ ಬಡಿಗೆ ಬಲಗೈಯಲ್ಲಿ ಪಾಟಿ ಪುಸ್ತಕ ಹಿಡಿದಿದ್ದಾಳೆ ಸಾಲೆ ಕಲಿಯದಿದ್ದ ಅಶಿಕ್ಷಿತ ಪ್ರೌಢರಿಗೆ ಸಂಕ್ರಾಂತಿ ಬೆನ್ನುಹತ್ತುತ್ತಾಳೆ. ಎಲ್ಲರು ಕಲಿ ಬೇಕೆಂತ ನಮ್ಮ ಶಾಸ್ತ್ರ ಹೇಳತದೆ.

ಕಂಟೆಪ್ಪ:— ಎಲಾ ಇವನ, ಸಾರು ಅಯ್ಯನವರೂ ಕಲೋದ ಹೇಳತಾರಲ್ಲಾ. ಏನಲೆ ಸ್ವಾಮಿ ನೀವ ಸಹಾ ಕಲಿಲಾಕ ಹೇಳತೀರಿ. ಕಲಿದಿದ್ರ ಏನ ಆಗತಯ್ತಿ ?

ಸ್ವಾಮಿಃ— ಕಲಿಯದೆ ಇದ್ದವನಿಗೆ ಇನ್ನು ಮುಂದೆ ಮರ್ಯಾದೆ ಕಡಿಮೆ. ಕಲಿಯದೆ ಇದ್ದ ರೈತನಿಗೆ ಭೂಮಿ ಸಿಗುವದಿಲ್ಲ; ಕಲಿಯ

ದವನಿಗೆ ಕೂಲಿ ಕಡಿಮಿ. ಕಲಿಯದೆ ಇದ್ದವನಿಗೆ ಜುಲುಮಿಯಿಂದ ಕಲಿಸತಾರ. ಅದಕ ನೀವೆಲ್ಲ ಪ್ರೌಢರು ರಾತ್ರಿ ಶಾಲೆಗೆ ಹೋಗಿರಿ.

ಕಂಟಪ್ಪಃ— ನೀ ಏನ ಅಯ್ಯನವರೋ ? ಏನ ಸಾಲಿ ಕಲಿಲಾಕ ಹೇಳೂ ಭಾಮುಬ್ಯಾನೋ !

ಸ್ವಾಮಿಃ- ನಾವು ರಾಷ್ಟ್ರೀಯ ಸ್ವಾಮಿಗಳು. ದೇಶ ಹಿತದ ಸಲು ವಾಗಿ ನಮ್ಮ ಪಂಥವನ್ನು ಶ್ರೀ ಬಸವಣ್ಣ ಪ್ರಭುಗಳು ಸ್ಥಾಪಿಸಿದ್ದರು. ಬರಬರುತ್ತಾ ಪರಕೀಯ ರಾಜಸತ್ತೆಯ ಮೂಲಕ ನಮ್ಮ ವ್ಯವಸಾ ಯವು ಬೇರೆಯಾಯಿತು. ಈಗ ಸ್ವತಂತ್ರ ಭಾರತದಲ್ಲಿ ಪುನಃ ದೇಶೋದ್ಧಾರದ ಕಾರ್ಯವನ್ನು ಕೈಕೊಂಡಿದ್ದೇವೆ. ಜನರು ಕೊಟ್ಟ ದಕ್ಷಿಣೆಯನ್ನು ಶಿಕ್ಷಣ ಕಾರ್ಯಕ್ಕೆ ಕೊಡುತ್ತೇವೆ.

ಕಂಟಪ್ಪಃ— ಹೊಟ್ಟೆಗೇನ ಕ್ಯಾರ ಹಾಕೋತಿರೇನ ?

ಸ್ವಾಮಿಃ— ನಿಮ್ಮಂಥ ಭಕ್ತರ ಮನೆಯಲ್ಲಿ ಉಂಡು ದೇಶಸೇವ ಮಾಡುತ್ತೇವೆ. ಕೊಡಿರಿ ದಕ್ಷಿಣೆ ಮುಂದಿನ ಓಣಿಗೆ ಹೋಗುತ್ತೇನೆ. " ಸಾಂಬ ಹರಹರ ಮಹಾದೇವ "

ಕಂಟಪ್ಪಃ— ದಕ್ಷಿಣೆ ಕೊಡಬೇಕಂದ್ರ ಬಿಚ್ಚ ಬಿಲ್ಲಿ ಇಲ್ಲ.

ಸ್ವಾಮಿಃ— ದುಡ್ಡ ಇರದಿದ್ದರೆ ಆಣೆ, ಚವಲಿ, ಪಾವಲಿ, ರೂಪಾಯಿ ಏನಿದ್ದರೂ ನಡೆಯುತ್ತದೆ. ಕೊಡಿರಿ. ಎಲ್ಲರೂ ದಾನ ಕೊಟ್ಟು ಶಿಕ್ಷಣ ಕಾರ್ಯಕ್ಕೆ ನೆರವು ನೀಡಿರಿ.

ಕಂಟಪ್ಪಃ— ತಗೋ ಈ ಚವಲಿ. [ಚವಲಿ ಕೊಡುತ್ತಾನೆ.] (ಸ್ವಾಮಿ ಹೋಗುತ್ತಾನೆ. ಹಂಪಣ್ಣ ಕಂದೀಲ ಹಚ್ಚಿ ಕೊಂಡು ಬರುತ್ತಾನೆ.)

ಹಂಪಣ್ಣಃ— ಏನ ಕಂಟಣ್ಣಾ ಏನ ನಡದಯ್ತಿ ಇಲ್ಯಾಕ ಸಂತಿದಿ !

ಕಂಟಪ್ಪಃ— ಸಾರೂ ಅಯ್ಯನವರ ಬಂದಿವ್ರು ಮಳಿ ಜೆಳಿ ಕೇಳ್ತನಿಂತೀನಿ !

ಹಂಪಣ್ಣಃ— ಮತ್ತೇನ ಹೇಳಿದ್ರು ಸ್ವಾಮಿಗಳು.

ಕಂಟಪ್ಪಃ— ಪ್ರೌಢ ಮಂದಿ ಕಲ್ಯಾಕ ಬೇಕ ಕಲಿದಿವ್ರ ಜುಲ ಮಿಯಿಂದ ಕಲಸತಾರಂತ.

ಹಂಪಣ್ಣಃ- ಹೌದು ನಾವು ಈಗ ೩||೪ ತಿಂಗಳಾತು. ಕಲಿಯುಹ ತ್ತಿದ್ದೇವೆ. ವಸಂತರಾಯುರು ಕಲಿಸುತ್ತಿರುವರು ನೀನೂ ನಡೆ ಈ ಊರಲ್ಲಿ ರಾತ್ರಿ ಸಾಲೆ ಪ್ರಾರಂಭವಾಗಿ ೩||೪ ತಿಂಗಳಾದವು

ಕಂಟಪ್ಪಃ— ರಾತ್ರಿ ಸಾಲಿ ಎಲ್ಲಿ ನಡಿಸಿದಾರು ?

ಹಂಪಣ್ಣಃ— ಹೊಸಮನಿ, ಶೇಸಪ್ಪನ ವ್ಯಾಸ್ಯಾಗ ಸಾಲಿ ಹಾಕಿ ದ್ದಾರೆ, ಸುಮಾರು ೩೦|೪೦ ಮಂದಿ ಕಲಿಯುಲಿಕ್ಕೆ ಬರತಿರತಾರ.

ಕಂಟಪ್ಪಃ— ಹಾ ಹಾ ಮೊನ್ನೆ ನಾ ಅಲ್ಲಿಂದ ಹಾದ ಬರು ವಾಗ ನೋಡಿದಿನಿ. ಗ್ಯಾಸ ಹಚ್ಚಿವ್ರು, ಫೋನೋ ಹಾಡಾಕ ಹತ್ತಿತ್ತು, ಮಂದಿ ಕೂಡಿತ್ತು, ನನಗೇನಗೊತ್ತು, ಯಾರದೋ ಮದವಿ ನಿಬ್ಬಣ ಇಳದೇತಿ ಅಂತ ತಿಳಿದಿನ್ನಿ ?

ಹಂಪಣ್ಣಃ— ಛೀ, ಹುಚ್ಚಾ, ಅಲ್ಲೇ ನಾವೆಲ್ಲರೂ ಕಲಿತಿರ ತೇವ ? ನೀನೂ ನಡಿ. ವಸಂತರಾಯರ ನಮಗ ಕಲಿಸತಿರತಾರ, ಕತಿ ಹೇಳತಾರ, ಬಲ್ ಮಜಾ ಇರತೇತಿ. ನಡಿ, ನಡಿ

ವಸಂತರಾವಃ— ನಿಮ್ಮಂಥ ಅಶಿಕ್ಷಿತರ ಸಲುವಾಗಿ ಹೇರಳ ಹಣ ವೆಚ್ಚಮಾಡಲು ಸರಕಾರವು ಸಿದ್ಧವಿದೆ ಓಣಿಯಲ್ಲಿ ಹರಟಿ ಹೊಡೆಯುತ್ತ ಕೂಡ್ರುವದಕ್ಕಿಂತ ರಾತ್ರಿ ಶಾಲೆಯಲ್ಲಿ ದಿನಾಲು ತಾಸೆರಡು ತಾಸು ಬರ್ರಿ ನಿಮಗೆ ಅನಾಯಾಸವಾಗಿ ಓದು ಬರೆಯಲು ಬರುತ್ತದೆ. ನಿಮಗೆ ಜ್ಞಾನದ ಹೊಸ ಬೆಳಕು ತೋರುತ್ತದೆ. ನಡೆಯಿರಿ ರಾತ್ರಿಶಾಲೆಗೆ ಹೋಗುವಾ (ಹೋಗುತ್ತಾರೆ)

———

೬ ನೇ ದೃಶ್ಯ

(ರಾತ್ರಿ ಶಾಲೆ - ಕೆಲವರು ಬರೆಯಹತ್ತಿದ್ದಾರೆ. ಓದಹತ್ತಿದ್ದಾರೆ ವಸಂತರಾವ ಬರುತ್ತಾನೆ.)

ಹಂಪಣ್ಣಃ— ಹೂ ನಾಗಪ್ಪಾ ಓದು. ಇದು ವರ್ತಮಾನ ಪತ್ರ ವಿದೆ. ಈ ದೊಡ್ಡಕ್ಷರಗಳನ್ನು ಓದು ನೋಡುವಾ.

ನಾಗಪ್ಪಃ— ಎರಡ ತಿಂಗಳಾತ ನಾ ಕಲ್ಯಾಕ ಪತ್ತಿ. ಇಷ್ಟರಾಗ ವತ್ತ್ರರಮಾನ ಪತ್ತ್ರರ ಓದಾಕ ಹ್ಯಾಂಗ ಬಂದಿತೋ ಮಾವಾ?

ಹಂಪಣ್ಣಃ— ನಾನು ೩ ತಿಂಗಳಲ್ಲಿ ಪುಸ್ತಕ ಓದಹತ್ತಿದೆನು. ಈಗ ವರ್ತಮಾನ ಪತ್ರಾ, ಕಾರ್ಡ, ಕತಬಿ ಎಲ್ಲ ಓದುತ್ತೇನೆ. ಹೂ ಓದು.

ನಾಗಪ್ಪಃ— ನೀ ಹರತ ಬುದ್ಧ್ಯಾಂವ ಅದಕ ನಿನಗ ಗಡಾ ಬುದ್ದಿ ಭೆಟ್ಟಿ ಆತ. ನಾ ಹನ್ನ್ಯಾಡ ವರ್ಸ ಎಮ್ಮಿಕಾದಿದೇನ ಕೋಣ ಪ್ಪನಗೆಶ್ಯಾ ನಾ. ಅದಕ ಗಡಾ ಬರಾಕಿಲ್ಲ. ಇದ್ಯಾನಪ್ಪಾ ಪಂ. ನೇಹರು- (ಸಾವಕಾಶ ಓದುತ್ತಾನೆ.)

ಹಂಪಣ್ಣಃ— ಪಂ. ಅನ್ನಬಾರದು. ಹಾಗೆ ಬರೆದಿದ್ದಕ್ಕೆ ಪಂಡಿತ ಎಂದು ಓದಬೇಕು. ಪಂಡಿತ ನೇಹರು (ಎಂದು ಓದಿ ತೋರಿಸು ತ್ತಾನೆ. ನಾಗಪ್ಪನು ಹಾಗೆ ಅನ್ನುತ್ತಾನೆ.)

ನಾಗಪ್ಪಃ— ಈ ಪಂಡಿತ ನೇಹರು ಅಂದ್ರಯಾರಾ? ನಮ್ಮ ಬಸ್ತಿ ಪೂಜಿಮಾಡೂ ಪಂಡಿತ ಅಪ್ಪನ್ಹಂಗ ಬಸ್ತಿಪೂಜಿ ಮಾಡಾವರ ಯ್ಯಾನ? ಮತ್ತು ಜವಾಹರಲಾಲ ನೇಹರು ಅನಾವರ ಅವರ ಯಾರಾ?

ಹಂಪಣ್ಣಃ— ಛೀ ಹುಚ್ಚಾ ಬಸ್ತಿ ಪಂಡಿತರು ಇವರಲ್ಲ. ಪಂಡಿತ ಅನ್ನುವ ರೂಢಿ ಆ ನಾಡಿನಲ್ಲಿದೆ. ಬುದ್ಧಿವಂತರಿಗೆ ಪಂಡಿತ ಅನ್ನುತ್ತಾರೆ. ಇವರೇ ಜವಾಹರಲಾಲ ನೇಹರುರವರು ನಮ್ಮ ಹಿಂದೂ ರಾಷ್ಟ್ರದ

ಮುಖ್ಯ ಪ್ರಧಾನರು. ಈವೊತ್ತು ವಿಲಾಯತಿಯಿಂದ ದಿಲ್ಲಿಗೆ ಬಂದರು.

ನಾಗಪ್ಪಃ— ತಿಳಿತಬಿಡ, ನಾ ಈ ತಿಂಗಳದಾಗ ಸಹಿ ಮಾಡಾಕ ಕಲಿತಿವೇನ, ಇನ್ನ ಹೆಬ್ಬಟ್ಟ ಊರುದು ಕಟ್ಟ ಆತ. ಏನೋಮಾವಾ ನೀ ಟೊಪ್ಪಿಗೆ ಹಾಕಾಕ ಹತ್ತಿದೇನೋ? ಥೇಟ ಕಲತವರಂಗ ಕಾಣಾಕ ಹತ್ತಿದಿ ನೋಡ.

ಹಂಪಣ್ಣಃ— ಅಶಿಕ್ಷಿತತನಪಿತ್ರೆಂದರೆ ಎಲ್ಲವು ಅಸಡ್ಡಾಳಾಗಿ ಕಾಣುತ್ತದೆ. ಚಲೋ ಜನರ ಹತ್ತರ ಹೋಗಲು ನಾಚಿಕೆ ಬರುತ್ತದೆ. ಅವರ ಹತ್ತರ ಮಾತಾಡಲು ಧೈರ್ಯವಾಗುವದಿಲ್ಲ. ಕಲಿಯಿತೆಂದರೆ ಎಲ್ಲಿ ಬೇಕಾದಲ್ಲಿ ಮರ್ಯಾದೆ ಸಿಗುತ್ತದೆ. ಬೇಕಾದ ಡ್ರೇಸ ಮಾಡಿ ದರೂ ಚಂದ ಕಾಣುತ್ತದೆ. (ವಸಂತರಾಯ ಬರುತ್ತಾನೆ) ಏನರಿ ಈಹೊತ್ತು ಏನು ಹೊಸ ಸುದ್ದಿ? ಮತ್ತೇನರಿ ಹೊಸ ಸುದ್ದಿ ?

ವಸಂತರಾವಃ— ಈ ಹೊತ್ತು ಎರಡು ಹೊಸ ಸಂಗತಿಗಳಿವೆ. ವಿಕಾಸ ಯೋಜನೆಯ ಸಂಚಾಲಕರು ಬಂದಿದ್ದರು.

ಹಂಪಣ್ಣಃ— ಇದೇನ ಹೊಸದ ಕೇಳತೇವಿ ? ವಿಕಾಸ ಯೋಜನೆ ಅಂದರೆ ನಮ್ಮಂತೆ ರಾತ್ರಿ ಸಾಲಿಕಲಿತ ಮಂದಿಗಿ ನೋಕರಿ ಕುಡತಾರ ಏನು ?

ವಸಂತರಾವಃ— ಹಾಗೇನೂ ಅಲ್ಲ. ನಮ್ಮ ಭಾರತ ಸರಕಾರದ ವರು ಐದುವರ್ಷದಲ್ಲಿ ಮಾಡಬೇಕಾಗಿದ್ದ ಸುಧಾರಣೆಗಳನ್ನು ಒಟ್ಟು ಗೂಡಿಸಿ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದಾರ. ಅದಕ್ಕೆ ಪಂಚ ವಾರ್ಷಿಕ ಯೋಜನೆ ಅನ್ನುತ್ತಾರ.

ಹಂಪಣ್ಣಃ— ಹೌದ, ಹೌದ, ಒಂದಕ್ಕ ಚುನಾವಣೆಕಾಲಕ್ಕ ಈ ಮಾತ ಹೇಳತಿದ್ರು ?

ವಸಂತರಾವ:— ಅದೇ ಯೋಜನೆಯನ್ನು ಕಾರ್ಯರೂಪದಲ್ಲಿ ತರುವದಡೆ. ಅದಕ್ಕೆ ವಿಕಾಸ ಯೋಜನೆ ಅನ್ನುತ್ತಾರೆ.

ಹಂಪಣ್ಣಾ:— ಈ ವಿಸಾಕ ಯೋಜನಾದಾಗ ಏನೇನ ಮಾಡೋದಯ್ತಿ ?

ವಸಂತರಾವ:— ವಿಸಾಕ ಅಲ್ಲ ! ವಿಕಾಸ ಅನ್ನಬೇಕು. ನಾಡಿನಲ್ಲಿ ನಿರುದ್ಯೋಗತನವನ್ನು ಹೋಗಲಾಡಿಸಿ, ಸರ್ವರಿಗೆ ಹೊಟ್ಟೆತುಂಬ ಅನ್ನ, ಇರಲು ಮನೆ, ಮೈತುಂಬ ಬಟ್ಟೆ, ಸಾರ್ವತ್ರಿಕ ಆರೋಗ್ಯ, ಶಿಕ್ಷಣ ಇವೇ ಮೊದಲಾದ ಸಂಗತಿಗಳನ್ನು ಪೂರ್ತಿಗೊಳಿಸಿ ಭಾರತದಲ್ಲಿ ರಾಮರಾಜ್ಯ ಮಾಡಬೇಕಾಗಿದೆ.

ಹಂಪಣ್ಣಾ:— ನೀವ ಹೇಳಿಧಾಂಗ ಎಲ್ಲಾ ಆತಂದ್ರ ಕೇಳೋದ ಏನ್ರಿ ? ಇದೆಲ್ಲಾ ಆಗೋದ ಖರೇ ಏನ್ರಿ ?

ವಸಂತರಾವ:— ಸರಕಾರವು ಸುಳ್ಳು ಮಾತಾಡುವದಿಲ್ಲ. ಅವರ ಯೋಜನೆಗಳು ಈಗಾಗಲೇ ಸಿದ್ಧವಾಗಿವೆ. ಪ್ರತಿಯೊಂದು ಪ್ರಾಂತದಲ್ಲಿ ೩೦೦ ಹಳ್ಳಿಗಳನ್ನು ತಕ್ಕೊಂಡು ಅಲ್ಲಿ ಪ್ರಯೋಗ ಪ್ರಾರಂಭಿಸಿದ್ದಾರೆ.

ನಾಗಪ್ಪಾ:— ಅಲ್ಲರೀ, ಇಂತಾ ಗುಡ್ಡದಂತಾ ಕೆಲಸಕ ರೊಕ್ಕ ಬ್ಯಾಡ ಏನ್ರಿ ? ನಮ್ಮೂರ ಸಾಲಿ ಕಟ್ಟಸಾಕ ರೊಕ್ಕ ಇಲ್ಲ ಅಂತಾರು, ಮತ್ತ ನೀವ ಹೇಳಿದ ಕೆಲಸ ಏನರೆ ೩।೪ ಹಗೆತುಂಬ ಹಣಾ ಬೇಕಾದೀತಲ್ಲರೀ ?

ವಸಂತರಾವ:— ಹಣ ಇಲ್ಲದೆ ಯಾವ ಕೆಲಸವೂ ಆಗಲಾರದು. ಈ ಕೆಲಸಕ್ಕಾಗಿ ನಮಗೆ ಅಮೇರಿಕಾ ಸರಕಾರವು ಸಾಕಷ್ಟು ಧನ ಸಹಾಯ ಮಾಡುವದು.

ಹಂಪಣ್ಣಾ:— ಅಮೇರಿಕದವರ ಯಾಕ ಸಾಯ ಮಾಡತಾರ್ರಿ ? ಅಷ್ಟಾ ಸೋಟ್ರಿ ಮತ್ತ ಇಂಗ್ರಜರನ್ನ ಓಡಸಾಕ ಪಟೋಕನ ದುಡಿ ಬೇಕಾತ ? " ಪುದುಕ ಹೋಗಿ ಗಜಕರ್ಣ ಹತ್ತಬಾರದು. "

ವಸಂತರಾವ:— ಛೀ, ಹುಚ್ಚಾ ಹಾಗೇನೂ ಇಲ್ಲ. ಪಂಡಿತ ಜವಾಹರಲಾಲರ ಬಗ್ಗೆ ಎಲ್ಲ ರಾಷ್ಟ್ರಗಳಲ್ಲಿ ಸಹಾನುಭೂತಿಯಿದೆ. ಅವರ ಸಹಕಾರ ಸ್ನೇಹವನ್ನು ಸಂಪಾದಿಸಲು ಎಲ್ಲರೂ ಬಯಸು ತ್ತಾರೆ. ಅಮೇರಿಕಾ ರಾಷ್ಟ್ರವಾದರೂ ಸಹೋದರ ಭಾವನೆಯಿಂದಲೇ, ಭಾರತಕ್ಕೆ ಹೆಚ್ಚಿಗೆ ಧನ ಸಹಾಯ ಮಾಡುತ್ತದೆ.

ಹಂಪಣ್ಣ:— ನಮ್ಮ ಜಿಲ್ಲೇದಾಗ ಈ ಕೆಲಸ ನಡಿಯೋದ ಏನ್ರಿ?

ವಸಂತರಾವ:— ನಮ್ಮ ಜಿಲ್ಹೆಯಲ್ಲಿ ನಮ್ಮ ತಾಲೂಕಿನ ಎಲ್ಲ ಹಳ್ಳಿ, ಮತ್ತು ಬೇರೆ ತಾಲೂಕಿನ ಕೆಲವು ಹಳ್ಳಿ ಕೂಡಿಸಿ ೧೭೦ ಹಳ್ಳಿ ಗಳಲ್ಲಿ ಕೆಲಸ ನಡೆಯಿಸುತ್ತಾರೆ. ೩ ವರ್ಷದ ಕೆಲಸಗಳಿಗಾಗಿ ೭೫ ಲಕ್ಷ ರೂಪಾಯಿ ಮಂಜೂರಾಗಿವೆ.

ಹಂಪಣ್ಣ:— ಹಾಂಗಾರೇನ? ನೀವ ಈ ಕೆಲಸದಾಗನೂ, ಇರಾವರ. ಆದಷ್ಟ ನಮ್ಮ ಊರಿಗೆ ಎಲ್ಲಾ ಸೋಯಿ ಮಾಡಬೇಕ ನೋಡ್ರಿ !

ವಸಂತರಾವ:— ನಮ್ಮ ಊರು ಪರರ ಊರು ಎಂಬ ಭೇದ ಮಾಡಲಾಗದು. ಸದ್ಯಕ್ಕೆ ಅಹಾರ ಧಾನ್ಯದ ಕೊರತೆಯನ್ನು ಹೋಗಲಾಡಿಸಲಿಕ್ಕೆ ಕೆರೆ, ಕಾಲುವೆ ಆಣೆಕಟ್ಟು ಮೊದಲಾದವುಗಳನ್ನು ಕಟ್ಟಿಸಿ ಭೂಮಿಗೆ ನೀರು ಕೊಡುವ ಕೆಲಸ ಪ್ರಾರಂಭಿಸುತ್ತಾರೆ

ನಾಗಪ್ಪ:— ನೀವ ಹೇಳೋದ ಎಲ್ಲಾ ಬರಾಬರಿ ಆಯ್ತು? ಇಷ್ಟೆಲ್ಲಾ ಮಾಡತಿದ್ರುಸುದ್ದಾ ಸರಕಾರಕ ಹೆಸರ ಇಡತಾರಲ್ಲರೀ? ಇದೇನ ತಿಳಿವಾಲ್ತು?

ವಸಂತರಾವ:— ಹೆಸರಿಡುವವರಿಗೆ ಅದೊಂದೇ ಗೊತ್ತು. ಕಾರ್ಯ ಮಾಡುವದು ಅವರಿಗೆ ಬೇಡ. ಸುಮ್ಮ ಸುಮ್ಮನೆ ಹೆಸರಿಡುತ್ತ ತಿರುಗಾಡುತ್ತಾರೆ. ಅವರಿಗೆ ಅಧಿಕಾರ ಸಿಕ್ಕಿಲ್ಲ. ಇಲೆಕ್ಶನದಲ್ಲಿ ಆರಿಸಿಬರ ಲಿಲ್ಲ ಎಂದು ಸಿಟ್ಟಿನಿಂದ ಟೀಕಿಸುತ್ತಾರೆ. ಇರಲಿಬಿಡು ಇನ್ನೊಂದು

ದಿನ ವಿಕಾಸಯೋಜನೆಯ ಬಗ್ಗೆ ಎಲ್ಲರನ್ನು ಕೂಡಿಸಿ ಹೇಳುತ್ತೇನೆ. ನಾಳೆ ನಮ್ಮ ಪ್ರಾಂತದ ಶಿಕ್ಷಣ ಮಂತ್ರಿಗಳು ನಮ್ಮ ಸಮಾಜ ಶಿಕ್ಷಣದ ಕಾರ್ಯವನ್ನು ನೋಡಲಿಕ್ಕೆ ಬರತಕ್ಕವರಿದ್ದಾರೆ.

ಹಂಪಣ್ಣಃ— ವಾಹವ್ವಾ ! ಒಳ್ಳೇ ಆನಂದ. ಊರಲ್ಲಿ ನಾಲ್ಕಾರು ಅಗಸೆಗಳನ್ನು ಕಟ್ಟಿಸಿ, ತಳಿರು ತೋರಣಗಳಿಂದ ಊರು ರಬ್ಬ ಕಾಣು ವಂತೆ ಮಾಡುವಾ ?

ವಸಂತರಾವಃ— ಊರನ್ನು ಶೃಂಗರಿಸಿದರ ಕಾರ್ಯ ಮಾಡಿ ದಂತಾಗುವದಿಲ್ಲ. ಆದಷ್ಟು ಎಲ್ಲ ಪ್ರೌಢರನ್ನು ಸಾಕ್ಷರ ಮಾಡಿರಿ. ಅಗಸೆಬೇಡ, ತಳಿರು ಬೇಡ. ನಮ್ಮ ಕಾರ್ಯ ನೋಡಲು ಅವರು ಬರುತ್ತಾರೆ. ಅಗಸೆ ನೋಡಲು ಬರುವದಿಲ್ಲ.

ನಾಗಪ್ಪಾಃ— ಬರಾಬರಿ, ನಾವೆಲ್ಲರೂ ರೈತರು ನಿಮ್ಮ ಹತ್ತರ ಕಲತ ತಯಾರ ಆಗಿದ್ದೇವೆ. ಹರಿಜನ ಕೇರಿಯಲ್ಲಿ ಎಲ್ಲ ಪ್ರೌಢರಿಗೆ ನಿಳು ಮಾಸ್ತರರೂ ಕಲಿಸಿ ತಯಾರ ಮಾಡಿದ್ದಾರೆ. ಇದಲ್ಲದೆ, ಕೆಳಗಡೆ ಓಣ್ಯಾಗ ಕಲ್ಯಾಣ ಶೆಟ್ಟರು ಕಲಸ ತಿರತಾರ ಅಪ್ಪಿ ತಪ್ಪಿ ಹತ್ತಿಪತ್ತ ಮಂದಿ ಉಳದಿದರಾದೀತ ನಿರಕ್ಷರರೆಂದು. ಅವರನ್ನೂ ಈ ತಿಂಗಳದಾಗ ರಾತ್ರಿ ಸಾಲಿಗಿ ಬರುಹಾಂಗ ಮಾಡಿದರ ಆತ.

ವಸಂತರಾವಃ— ನಿಜ ನಿಜ. ಊರೊಳಗಿನ ಸುಶಿಕ್ಷಿತರೆಲ್ಲರೂ ಇದೊಂದು ದೇಶಕಾರ್ಯವೆಂದು ಮಾಡುತ್ತ ಹೋದಲ್ಲಿ ಊರಲ್ಲಿ ಸಾಕ್ಷರತಾ ಪ್ರಸಾರ ಆಗೇ ಆಗುತ್ತದೆ. ಈ ಕಾರ್ಯ ಕೈಕೊಂಡವರಿಗೆ ಸರಕಾರವು ಕೆಲವು ಧನ ಸಹಾಯ ಮಾಡುತ್ತದೆ. ಅದಕ್ಕಾಗಿ ಶಿಕ್ಷಣ ದಾನದ ಕಾರ್ಯವನ್ನು ಪ್ರತಿಯೊಬ್ಬ ಸುಶಿಕ್ಷಿತನೂ, ಶಿಕ್ಷಕನೂ ಅನು ಸರಿಸಲಿಕ್ಕೆ ಕೈಮುಗಿದು ಬೇಡುತ್ತೇನೆ.

---

೭ ನೇ ದೃಶ್ಯ

(ಜಾಹೀರ ಸಭೆ:— ಮುಖ್ಯ ಮಂತ್ರಿಗಳು ಬರುತ್ತಾರೆ ಸ್ವತಃ ಊರ ಪ್ರಮುಖರು ಕೂತಿರುತ್ತಾರೆ)

ವಸಂತರಾವ:— ಬಂಧುಭಗಿನಿಯರೇ, ಈ ದಿನ ಇಲ್ಲಿಗೆ ಆಗಮಿಸಿದ ಮಾನ್ಯ ಅತಿಥಿಗಳು ನಮ್ಮ ಪ್ರಾಂತದ ಶಿಕ್ಷಣದ ಮಂತ್ರಿಗಳು. ನಮ್ಮ ಪ್ರೌಢಶಿಕ್ಷಣ ಕೇಂದ್ರದ ಕಾರ್ಯಕಲಾಪಗಳನ್ನು ನೋಡಲು ಬಂದಿರುವರು. ಅದಕ್ಕಾಗಿ ನಿಮ್ಮೆಲ್ಲರ ಪತಿಯಿಂದ ಅವರನ್ನು ಸ್ವಾಗತ ಮಾಡುತ್ತೇನೆ. ಅವರು ತಮ್ಮ ಉಜ್ವಲ ವಿಚಾರಪೂರಿತ ಭಾಷಣ ಮಾಡತಕ್ಕವರಿದ್ದಾರೆ. ನೀವೆಲ್ಲರೂ ಶಾಂತರೀತಿಯಿಂದ ಕೇಳಲಿಕ್ಕೆ ವಿನಂತಿಯಿದೆ. (ಮಂತ್ರಿಗಳು ಭಾಷಣಮಾಡಲಿಕ್ಕೆ ನಿಲ್ಲುತ್ತಾರೆ. ಎಲ್ಲರೂ, ಚಪ್ಪಾಳಿ ಬಾರಿಸಿ; ಮಹಾತ್ಮಾಗಾಂಧಿ ಮಹಾರಾಜಕೀ ಜಯ ಅನ್ನುತ್ತಾರ)

ಶಿಕ್ಷಣ ಮಂತ್ರಿ. — ಬಂಧು ಭಗಿನಿಯರೇ, ಈ ದಿನ ತಾವೆಲ್ಲರೂ ನನ್ನ ಸ್ವಾಗತಮಾಡಿದ್ದಕ್ಕೆ ನನಗೆ ಆನಂದ. ಈ ಆನಂದವು ನನ್ನ ವ್ಯಕ್ತಿಗೆಂದು ನಾನು ನಂಬದೆ, ಆ ಪವಿತ್ರ ಕಾಂಗ್ರೇಸಸಂಸ್ಥೆಯ ಸ್ವಾಗತವೆಂದೇ ನಂಬುತ್ತೇನೆ. ನಮ್ಮ ಸ್ವಾತಂತ್ರ್ಯರಕ್ಷಣೆಗೆ ಶಿಕ್ಷಣವೆಂಬುದು ಬಲವಾದ ಶಸ್ತ್ರವಿದೆ. ಹಿಂದಿನ ಸರಕಾರವು ಸ್ವಾಭಿಮಾನ ಶೂನ್ಯತೆಯ ಶಿಕ್ಷಣವಿತ್ತುದರಿಂದ ನಮ್ಮ ನಮ್ಮೊಳಗೆ, ಕಲಹ, ಜಾತ್ಯಾಂಧತೆ, ಮೊದಲಾದವುಗಳ ಭೇದನೀತಿಯನ್ನುದಯಿಸಿ ರಾಜ್ಯನಾಳಿದರು. ನಿಮ್ಮ ಊರಲ್ಲಿ ನಡೆಯಿಸಿದ ಸಾಕ್ಷರ ಪ್ರಸಾರ ಕಾರ್ಯದ ಪರಿಣಾಮ ನೋಡಿ ನನಗೆ ಹಿಡಿಸಲಾರದಷ್ಟು ಹಿಗ್ಗು. ಕರ್ನಾಟಕ ಪ್ರೌಢ ಶಿಕ್ಷಣ ಸಮಿತಿಯವರು ಆದರ್ಶ ಕಾರ್ಯ ಮಾಡುತ್ತಿರುವರು. ಅದಕ್ಕಾಗಿ ನನಗೆ ಪರಮಾನಂದ ವಾಗುತ್ತದೆ. ನಾಡಿನಲ್ಲಿ ಸ್ತ್ರೀವರ್ಗದಲ್ಲಿದ್ದ ಅಶಿಕ್ಷಿತತನವನ್ನು ಆಯಾ ಮನೆತನ ಸಾಕ್ಷರರಾದ ಪುರುಷ

ವರ್ಗದವರು ಕಳೆಯಲು ಹೆಣಗಾಡಬೇಕು. ಸ್ತ್ರೀವರ್ಗದ ಉನ್ನತಿಗಾಗಿ ಶ್ರೀ ಸೌ. ಪದ್ಮಾವತಿದೇವಿ ಅಂಗಡಿಯವರು ಪ್ರಯತ್ನಿಸುತ್ತಲಿದ್ದಾರೆ. ಅವರ ಕಾರ್ಯವು ಬೇಗನೆ ಯಶಸ್ವಿಯಾಗಿ, ಕನ್ನಡನಾಡಿನಲ್ಲಿಯ ಅಶಿಕ್ಷಿತತನದ ಭೂತವು ಬಯಲಾಗಿ ಸ್ವತಂತ್ರ ಭಾರತದಲ್ಲಿ ಕರ್ನಾಟಕಕ್ಕೆ ಆದರ್ಶಸ್ಥಾನದೊರೆಯುವದೆಂದು ನನ್ನ ಭರವಸೆಯಿದೆ. ಮಹಾತ್ಮರು ಕಣ್ಮರೆಯಾದರೆಂದು ಕೊರಗಬೇಡಿರಿ. ಅವರು ನಮಗಿಂತ ದಿವ್ಯ ಬೆಳಕಿನಲ್ಲಿ ನಮ್ಮ ಬಾಳಿನ ಬೆಳಕು ನೋಡುವಾ. ರೈತ ಬಂಧುಗಳು ಸಾಕ್ಷರರಾಗಿ ನಮ್ಮ ಸ್ವರಾಜ್ಯವನ್ನು ರೈತರಾಜ್ಯವನ್ನಾಗಿ ಮಾಡಬೇಕೆಂದು ಹಾರೈಸುತ್ತೇನೆ. **ಜಯ ಹಿಂದ !**

ವಂದೇ ಮಾತರಂ ।
ಸುಜಲಾಂ । ಸುಫಲಾಂ । ಮಲಯಜ ಶೀತಲಾಂ ।
ಸಸ್ಯಶ್ಯಾಮಲಾಂ । ಮಾತರಮ್ ॥ ಪಲ್ಲ ॥
ಶುಭ್ರ ಜ್ಯೋತ್ಸ್ನಾಂ । ಪುಲಕಿತ ಯಾಮಿನೀಂ ।
ಫುಲ್ಲ ಕುಸುಮಿತ । ದ್ರುಮದಲ ಶೋಭಿನೀಂ । ಸುಹಾಸಿನೀಂ ।
ಸುಮಧುರ ಭಾಷಣೀಂ ।
ಸುಖದಾಂ । ವರದಾಂ । ಮಾತರಮ್ । ॥ ೧ ॥
ಬೋಲೋ ! ಭಾರತಮಾತಾಕಿ ಜಯ !
ಮಹಾತ್ಮಾಗಾಂಧಿ ಮಹಾರಾಜಕಿ ಜಯ !

—: ನಾಣ್ಣುಡಿಗಳು :—

(೧) ಪ್ರೌಢರ ಶಿಕ್ಷಣ ರಾಷ್ಟ್ರಕ್ಕೆ ಭೂಷಣ.

(೨) ಬರಹ ಬಾರದ ಬರಡ ಕಣ್ಣಿದ್ದೂ ಕುರುಡ.

(೩) ರಾತ್ರಿ ಶಾಲೆಯು ಮಲ್ಲ ಶಾಸ್ತ್ರಿಯಾಗಬಲ್ಲ.

(೪) ಜಾತ್ರೆಗೆ ಹೋಗದಿದ್ದರೂ ರಾತ್ರಿಯ ಶಾಲೆಗೆ ಹೋಗು.

(೫) ಸುಶಿಕ್ಷಿತ ಪ್ರೌಢನು ಅಶಿಕ್ಷಿತರಲ್ಲಿ ಗಣ್ಯನು.

(೬) ಅಶಿಕ್ಷಿತತನವೇ ಅವಮಾನ, ಸುಶಿಕ್ಷಿತತನವೇ ಸನ್ಮಾನ.

(೭) ಕಲಿತವ ಹುಲಿ, ಕಲಿಯದವ ಇಲಿ.

(೮) ಕಲಿಯದವನ ಬಾಳು, ನಾಯಿಗೂ ಕೀಳು.

(೯) ಕಲಿತವ ಅರಸ, ಕಲಿಯದವ ಗೂರಸ.

(೧೦) ಒಕ್ಕಲಿಗನಾದರೂ ಅಕ್ಕರ [illegible]

(೧೧) ಓದುಬಾರದ ಒಕ್ಕಲಿಗನ ಬಾ[illegible], [illegible]ದರೂ ಹಾ[illegible].

(೧೨) ಕಲಿಯದ ಜಟ್ಟಿ, ಕಲಿತವಗ [illegible]

ಅಜಿತ ಪ್ರಕಾಶನ ಹಾಗೂ ವಿಜಯಶ್ರೀಯ ಪುಸ್ತಕಗಳು.

1	A Pen Picture of Pandit Nehru	1	0	0
2	"Sthita Pradnya Sutra' V. R. Kapre	0	6	0
೩	ಜನಪದ ೩ — ಶ್ರೀಕೃಷ್ಣ ಪಾಟೀಲ ನಾಟಕ	೧	೫	೦
೪	[illegible] — ಸಂಗನಗೌಡ ಗೌಡ ,,	೦	೨	೦
೫	ಅಜಿತನ ಶಿಸ್ತು — ಪಾ. ಧೋ. ಧುಮ B. A ,,	೦	೪	೦
೬	ವಿಜಯಶ್ರೀ — ಮಿರ್ಜಿ ಅಣ್ಣಾರಾಯ ಕಥಾಸಂಗ್ರಹ	೧	೦	೦
೭	ಹಂಬಲ — ಕೃಷ್ಣಮೂರ್ತಿ ಕಿತ್ತೂರ B. A. ,,	೧	೦	೦
೮	ಅಮೃತಧಾರೆ — ವೀರಪ್ಪ ಯರಗಟ್ಟಿ B. A. L. B. ,,	೧	೦	೦
೯	ದಾದಿ — ಶ್ರೀಕೃಷ್ಣ ಪಾಟೀಲ ,,	೦	೫	೦
೧೦	ಕನ್ನಡ ಮರಾಟಿ — ,, ,, ,,	೦	೩	೦
೧೧	ಶಿವನಾರು ? — ಪಿ. ವಿಜಯಕುಮಾರ	೦	೨	೦
೧೨	[illegible] — ಪಿ. ವಿಜಯಕುಮಾರ ಕಾದಂಬರಿ	೦	೧೨	೦
೧೩	ಕಣ್ಣುಮುಂದೆ ಕೇಳಿ — [illegible] ,,	೧	೮	೦
೧೪	ಕನ್ನಡಿಗರ ಇತಿಹಾಸ [illegible]	೦	೧೦	೦
೧೫	[illegible]	೦	೬	೦
೧೬	[illegible] B. A	೦	೬	೦
೧೭	ರಷ್ಯಾ [illegible]	೧	೯	೦
೧೮	ಮಹಾತ್ಮಾ ಗಾಂಧಿ [illegible] ,, ,,	೦	೮	೦
೧೯	ಸಂಗೊಳ್ಳಿ ರಾಯಣ್ಣ [illegible] ,, ,,	೦	೬	೦
೨೦	[illegible] ,,	೩	೦	೦
೨೧	ಭಾರತ ಭೂಮಿ [illegible] — [illegible] ,,	೦	೬	೦
೨೨	ಶ್ರೀವಾಸಂತಿ [illegible] ,, ,,	೦	೩	೦
೨೩	ಶ್ರೀಲಕ್ಷ್ಮೀ [illegible] ,, ,,	೦	೫	೦
೨೪	ಶ್ರೀ [illegible]	೦	೪	೦
೨೫	[illegible]	೦	೨	೦

ಶ್ರೀಮಂತ್ ಶಿವಾನಂದ ಸ್ವಾಮಿಗಳ

೨೬	[illegible]	೨	೬	೦
೨೭	ಬ್ರಹ್ಮಚರ್ಯವೇ ಜೀವನ [illegible] [illegible]	೩	೦	೦

ವೀರಭಾರತ ಗ್ರಂಥಮಾಲೆಯ ಎರಡನೆಯ ವರ್ಷದ ಪುಸ್ತಕಗಳು.

ವರುಷದಲ್ಲಿ ಆರು ಉತ್ತಮ ಗ್ರಂಥಗಳು.

ವಾರ್ಷಿಕ ವರ್ಗಣಿ ಕೇವಲ ೨ ರೂ. ೪ ಆ.

೧ ಅಜಿತನ ಶಿಸ್ತು ([illegible]ರೂಪಕಗಳು)
— [illegible] ೦ [illegible]

೨ [illegible] — ಶ್ರೀ. ಅ. ತ್ರಿ. ಕುಲಕರ್ಣಿ ೦ ೬

೩ [illegible] — ಶ್ರೀ. ಶ್ರೀಕೃಷ್ಣ ಪಾಟೀಲ ೦ [illegible]

೪ ಅಮೃತಧಾರೆ (ಪರಮಾರ್ಥ - ಜೀವನದ ಕಥೆಗಳು)
— ಶ್ರೀ [illegible] ೧ ೧

೫ ಬಲಿದಾನ (ಐತಿಹಾಸಿಕ ಕಾದಂಬರಿ)
— ಶ್ರೀ. ಪಿ [illegible] ೦ ೧೨

೬ ಸತ್ತವರ ಸೋಗಿನಲ್ಲಿ (ನಾಟಕ) — [illegible] ೦ ೧೧

ವಾರ್ಷಿಕ ವರ್ಗಣಿ ಕೇವಲ [illegible] (ಅಂಚೆ ಸಹಿತ [illegible])

ಈ ಕೂಡಲೆ ಚಂದಾದಾರರಾಗಿರಿ.

ಮೂರನೆಯ ವರುಷದಲ್ಲಿ ಪ್ರಕಟವಾಗಲಿರುವ ಪುಸ್ತಕಗಳು [illegible]

ವರುಷದಲ್ಲಿ ನಾಲ್ಕು ಉತ್ತಮ ಗ್ರಂಥಗಳು

೧ ವಿಜಯಾ — ಶರತ್ ಕಾದಂಬರಿ [illegible]

೨ ಕಣಗಿಲ ಹೂ (ಕಥಾಸಂಗ್ರಹ) - [illegible]

೩ ಬಾಳಿನ ತೆರೆಗಳು - ಶ್ರೀ. ಕೃಷ್ಣಮೂರ್ತಿ ಪುರಾಣಿಕ

೪ ? "

ವಾರ್ಷಿಕ ವರ್ಗಣಿ ಕೇವಲ [illegible] (ಅಂಚೆ ಸಹಿತ [illegible])

ದಿ ಅಜಿತ ಏಜನ್ಸಿ, ಟಿಳಕಚೌಕ—ಬೆಳಗಾವಿ.

ಮುದ್ರಕರು :- ಎ. ಪಿ. ಚೌಗುಲೆ,
ವೀರಭಾರತ ಮುದ್ರಣಾಲಯ, ಬೆಳಗಾವಿ.